# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜುಲೈ 05, 2020

ಸಂಪುಟ : 47 ಸಂಚಿಕೆ : 57 ದೂರವಾಣಿ : 254736 ವಾಟ್ಸ್‌ಆ್ಯಪ್ : 91642 99999 ಪುಟ : 12 ರೂ : 4.00 www.janathavani.com Email: janathavani@mac.com





# ಜಗಳೂರು: ಪತ್ರಕರ್ತರು ವೃತ್ತಿಯಲ್ಲಿ ಸದಾ ಜಾಗೃತರಾಗಿರಬೇಕು

## ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜಿ.ಚಿದಾನಂದಪ್ಪ

ಜಗಳೂರು, ಜು.4- 1843 ರಲ್ಲಿ ರೆವರೆಂಡ್ ಫಾದರ್ ಹರ್ಮೋನ್ ಮೋಗ್ಲಿಂಗ್ ಅವರ ಸಂಪಾದಕತ್ವದಲ್ಲಿ ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' ಆರಂಭವಾಯಿತು. ಆ ದಿನ ಕನ್ನಡ ದಿನಪತ್ರಿಕೆಯ ಪತ್ರಿಕೋದ್ಯಮ ಉಗಮಕ್ಕೆ ಕಾರಣವಾಯಿತು. ಹಾಗಾಗಿ ಜುಲೈ 1 ಪ್ರತಿವರ್ಷ ಪತ್ರಿಕಾ ದಿನಾಚರಣೆ ಎಂದು ಆಚರಿಸಲಾಗುತ್ತದೆ ಎಂದು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜಿ.ಚಿದಾನಂದಪ್ಪ ತಿಳಿಸಿದರು.

ಜಗಳೂರು ಪಟ್ಟಣದ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಾಲಯದಲ್ಲಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜನರ ಆಶಯಗಳಿಗೆ ಪೂರಕವಾಗಿ ಪತ್ರಕರ್ತ ಕಾರ್ಯನಿರ್ವಹಿಸಬೇಕು, ಪ್ರಗತಿ ಪರವಾಗಿ ಚಿಂತಿಸಬೇಕು, ಜವಾಬ್ದಾರಿ ಹೊಣೆ ಹೊತ್ತ ಪತ್ರಕರ್ತರು ಸದಾ ಜಾಗೃತರಾಗಿ ಇರಬೇಕಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಎ.ಎಮ್. ಕೊಟ್ರೇಶ್ ಮಾತನಾಡಿ, ಜನರಿಗೆ ಸತ್ಯದ ದರ್ಶನ ಮಾಡಿಸುವಲ್ಲಿ ಪ್ರಾಮಾಣಿಕ ಪತ್ರಕರ್ತ ದಿಟ್ಟತನವನ್ನು ತೋರಬೇಕಾಗಿದೆ. ಸಮಾಜದ ಸುಧಾರಣೆ ಹಾಗೂ ಜನರ ಮನಃಪರಿವರ್ತನೆಗೆ ಪತ್ರಿಕೆಗಳ ಪಾತ್ರ ಮಹತ್ವದ್ದಾಗಿದೆ ಎಂದರು.

ಪತ್ರಕರ್ತರು ಸುದ್ದಿಗಳ ಅನ್ವೇಷಣೆಯಲ್ಲಿ ಶ್ರದ್ಧೆ ಶ್ರಮ ಅಳವಡಿಸಿಕೊಂಡು ಕ್ರಿಯಾಶೀಲರಾಗಿ ದುಡಿಯುತ್ತಿದ್ದಾರೆ ಎಂದರು.

'ಜನತಾವಾಣಿ' ಉಪ ಸಂಪಾದಕ ಹಾಗೂ ಹಿರಿಯ ಪತ್ರಕರ್ತ ಬಿ.ಪಿ. ಸುಬಾನ್ ಮಾತನಾಡಿ, ಸಮಾಜದ ಏಳಿಗೆಗಾಗಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರಿಗೆ ಸರ್ಕಾರ ವಿಮೆ ಸೌಲಭ್ಯ ನೀಡುವ ವಿಚಾರದಲ್ಲಿ ಯಾವುದೇ ಕಾರಣಕ್ಕೂ ತಾರತಮ್ಯ ಮತ್ತು ಮೀನಾಮೇಷ ಎಣಿಸಬಾರದು ಎಂದು ಒತ್ತಾಯಿಸಿದರು.




ಕೋವಿಡ್-19 ನಿಯಂತ್ರಣ, ಜನ ಜಾಗೃತಿ ಹೋರಾಟದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ಪತ್ರಕರ್ತರು ಜೀವದ ಹಂಗು ತೊರೆದು ಸುತ್ತಾಡಿ ಕೆಲಸ ಮಾಡಿದ್ದಾರೆ ಎಂದರು.

ಹಿರಿಯ ಪತ್ರಕರ್ತ ಡಿ. ಶ್ರೀನಿವಾಸ್ ಮಾತನಾಡಿ, ಕೋವಿಡ್-19 ಹಾವಳಿಯಿಂದ ಇಡೀ ದೇಶವೇ ಸಂದಿಗ್ಧ ಸ್ಥಿತಿಯಲ್ಲಿರುವ ಈ ಸಮಯದಲ್ಲಿ ಜನ ಮತ್ತು ಜನತೆಯ ನಡುವೆ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಪತ್ರಿಕೆ. ಇದು ಪತ್ರಿಕೋದ್ಯಮದ ಬದ್ಧತೆಗೆ ಸಾಕ್ಷಿ, ಆದರೆ ಪತ್ರಕರ್ತರಿಗೆ ಸೇವಾ ಭದ್ರತೆ ಇಲ್ಲ. ಸರ್ಕಾರವು ಪತ್ರಕರ್ತರ ನೆರವಿಗೆ ಧಾವಿಸಬೇಕು ಎಂದು ಒತ್ತಾಯಿಸಿದರು.

ಪತ್ರಿಕೆಗಳು ತಂತ್ರಜ್ಞಾನದ ಭರಾಟೆಯಲ್ಲಿ ಆಯಾ ಕಾಲಘಟ್ಟಕ್ಕೆ ಮಾರ್ಪಾಡುಗಳನ್ನು ಮಾಡಿಕೊಂಡು ಈಗಲೂ ತಮ್ಮ ಅಸ್ತಿತ್ವ ಉಳಿಸಿಕೊಂಡು ಬಂದಿವೆ. ಇದೇ ಕಾರಣಕ್ಕೆ ಸಾಮಾಜಿಕ ಜಾಲತಾಣ ಮತ್ತು ಟಿವಿ ಯೂಟ್ಯೂಬ್ ನೋಡಿ ಸುದ್ದಿ ತಿಳಿದುಕೊಂಡರು ಪತ್ರಿಕೆ ಓದಿದಷ್ಟು ತೃಪ್ತಿ ನೀಡುವುದಿಲ್ಲ. ಅಷ್ಟರಮಟ್ಟಿಗೆ ಪತ್ರಿಕೆ ನಮ್ಮ ನಿತ್ಯ ಜೀವನದಲ್ಲಿ ಹಾಸುಹೊಕ್ಕಾಗಿದೆ ಎಂದರು.

ಈ ಸಂದರ್ಭದಲ್ಲಿ ಪತ್ರಕರ್ತರಾದ ಲೋಕೇಶ್ ಎಮ್. ಐಹೊಳೆ, ಸಿ. ಬಸವರಾಜ್, ವಿ.ಕೆ.ಬಸವರಾಜ್, ಬಾಬು ಹೆಚ್. ಮರೇನಹಳ್ಳಿ, ಧನ್ಯಕುಮಾರ್, ರವಿಕುಮಾರ್, ಎಂ.ರಾಜಪ್ಪ, ಮಾದಿಹಳ್ಳಿ ಮಂಜುನಾಥ, ಮಾರುತಿ, ವಾಸಿಮ್, ತಿಪ್ಪೇಸ್ವಾಮಿ, ಜಗದೀಶ್, ರಕೀಬ್, ಮಾರುತಿ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.


## ಕನ್ಸಲ್ಟೆನ್ಸಿ ಸರ್ವೀಸಸ್

ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:

Civil

**ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್** VCS

ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

ಮೊ. 99168 73399, 93432 77422, 99161 73399



## ಮನೆ ಬಾಡಿಗೆಗಿದೆ

Door No # 586/587, 4ನೇ ಕ್ರಾಸ್ ಕೆ.ಬಿ. ಎಕ್ಸ್‌ಟೆನ್ಷನ್‌ನಲ್ಲಿ, 5 ಬೆಡ್‌ರೂಂ ಇರುವ ಮಹಡಿ ಮನೆ ಬಾಡಿಗೆಗೆ ಇದೆ. ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ.

**96861 95326, 96861 95327**



LIC HFL LIC HOUSING FINANCE LTD

## WALK-IN INTERVIEW

For Fresher's / Experience, **LIC HFL** Davanagere invites Marketing Excutive

**Qualification :** Any Graduate With 50% Score.

**Monthly Income :** 15,000/- + additional Incentive Fulfillment Of Target.

**Walk-In Interview On 15-07-2020**

**9845011416, 7760247229**



## ಅಭಿನಂದನೆಗಳು

**ಡಾ. ರಾಹುಲ್ ಜೆ ಪಾಟೀಲ್**

HOD Of Civil Dept.
Jain Institute of Technology
Davangere.



ಅವರು ಕಳೆದ 5 ವರ್ಷಗಳಿಂದ ಹಾಗೂ **ಡಾ|| ಬಿ.ವಿ. ನಾಡಗೌಡ** ಇವರ ಮಾರ್ಗದರ್ಶನದಿಂದ ನಡೆಸಿದ ಅಧ್ಯಯನ **'ಹೈಡ್ರೋಜಿಯೊಲಾಜಿಕಲ್ ಸ್ಟಡೀಸ್ ಆಫ್ ಕರಳ- ದುಗ್ಗಾವತಿ ಹಳ್ಳ ಸಬ್ ಬೇಸಿನ್, ತುಂಗಭದ್ರಾ ನದಿ'** ದಾವಣಗೆರೆ ಡಿಸ್ಟ್ರಿಕ್ಟ್, ಕರ್ನಾಟಕ ಸ್ಟೇಟ್ ಇಂಡಿಯಾ ಈ ಅಧ್ಯಯನದ ವಿಷಯಕ್ಕೆ ದಿನಾಂಕ : 26.6.2020 ರಂದು **'ಗೌರವ ಡಾಕ್ಟರೇಟ್ ಪದವಿ'** ಲಭಿಸಿದೆ. ಇವರ ಪರಿಶ್ರಮಕ್ಕೆ **ತುಂಬು ಹೃದಯದ ಅಭಿನಂದನೆಗಳು.**

**SEVEN HILLS BUILDERS & DEVELOPERS**

✦ Suhas N. ✦ Charanraj C. ✦ Sagar H.P.
✦ Madhu Krishna Reddy ✦ Harish, Shamanur.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

ಚಿತ್ರದುರ್ಗ ವಿಭಾಗ, ಚಿತ್ರದುರ್ಗ

ಸಂ./ಕರಾಸಾ/ಚಿವಿ/ಸಂಚಾರ/ವಾಣಿಜ್ಯ/551,552,553/2020 ದಿನಾಂಕ : 02.07.2020

**ಜಾಹಿರಾತುಪ್ರಕಟಣೆ/ಇ-ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ : 4/5/6-2020**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಿತ್ರದುರ್ಗ ವಿಭಾಗದ ವ್ಯಾಪ್ತಿಗೆ ಬರುವ ಚಳ್ಳಕೆರೆ ನಿಲ್ದಾಣದ ಜನರಲ್ ಸ್ಟಾಲ್ ಮಳಿಗೆ ಸಂಖ್ಯೆ-24.16. ಚಿತ್ರದುರ್ಗ ಬಸ್ ನಿಲ್ದಾಣದ ಉಪಹಾರಗೃಹ, ದ್ವಿಚಕ್ರವಾಹನ ನಿಲ್ದಾಣ, ಹೊಸದುರ್ಗ ಬಸ್ ನಿಲ್ದಾಣದ ಜನರಲ್ ಸ್ಟಾಲ್ ಮಳಿಗೆ ಸಂಖ್ಯೆ-3, ಕ್ಕೆ ಪ್ರಕಟಣೆ 5/2020 ರಲ್ಲಿ ಇ-ಟೆಂಡರ್ ಮೂಲಕ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ.

ಚಿತ್ರದುರ್ಗ ವಿಭಾಗದ ವ್ಯಾಪ್ತಿಗೆ ಬರುವ ಚಿತ್ರದುರ್ಗ, ಹಿರಿಯೂರು, ಚಳ್ಳಕೆರೆ, ಹೊಸದುರ್ಗ, ಸಿರಿಗೆರೆ, ಭರಮಸಾಗರ, ಬಸ್ ನಿಲ್ದಾಣಗಳಲ್ಲಿ ಹೊರ ಮತ್ತು ಹೊಳ ಆವರಣಗಳಲ್ಲಿ ಖಾಲಿ ಇರುವ ಜಾಹೀರಾತು ಹೋರ್ಡಿಂಗ್ಸ್ ಮತ್ತು ಗ್ಲೋಸೈನ್ ಬೋರ್ಡ್ ಅಳವಡಿಸಲು ಪ್ಯಾಕೇಜ್‌ವಾರು ಮಾದರಿಯಲ್ಲಿ ಐದು (05) ವರ್ಷದ ಅವಧಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಪ್ರಕಟಣೆ 6/2020 ರಲ್ಲಿ ಸಂಧಾನ-ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಭರಮ ಸಾಗರ ಬಸ್ ನಿಲ್ದಾಣದ ಮಳಿಗೆ ಸಂಖ್ಯೆ-4, ಚಳ್ಳಕೆರೆ ಬಸ್ ನಿಲ್ದಾಣದ-8.12.23.18.25.9.22.15.10.13.14.21.7. ಹೊಸದುರ್ಗ ಬಸ್ ನಿಲ್ದಾಣದ ದ್ವಿಚಕ್ರ ವಾಹನ ನಿಲ್ದಾಣವನ್ನು, ಹಿರಿಯೂರು ಬಸ್ ನಿಲ್ದಾಣದ ಜನರಲ್ ಸ್ಟಾಲ್ -2, ಹಾಗೂ ಸಿರಿಗೆರೆ ಟಿಸ್ಟಾಲ್‌ನ್ನು ಸಂಧಾನ (ಮಾತುಕತೆ)ದ ಮೂಲಕ ಖಾಲಿಯಿರುವ / ಖಾಲಿಯಾಗಲಿರುವ ಶಾಶ್ವತ / ತೆರೆದ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಪ್ರಕಟಣೆ 4/2020 ರಲ್ಲಿ ಸಂಧಾನ ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್ WWW.KSRTC.IN ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಚಿತ್ರದುರ್ಗ-577501 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ ವಿಭಾಗೀಯ ಸಂಚಾರ ಅಧಿಕಾರಿ, 9606908962, ಹಾಗೂ 9606908971.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ, ಚಿತ್ರದುರ್ಗ ವಿಭಾಗ

ವಾಪಾಸಂಇ/ಅಲಕನಂದ/450/2020-21

# ಧರ್ಮಸ್ಥಳ ಯೋಜನೆಯಿಂದ ಹರಿಹರ ತಾ.ನಲ್ಲಿ 5 ಸಾವಿರ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ



ಮಲೇಬೆನ್ನೂರು, ಜು. 4- ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಹರಿಹರ ತಾಲ್ಲೂಕಿನಲ್ಲಿ 5 ಸಾವಿರ ಸಸಿಗಳನ್ನು ನೆಡುವುದಾಗಿ ಯೋಜನೆಯ ತಾ. ಯೋಜನಾಧಿಕಾರಿ ಗಣಪತಿ ಹೇಳಿದರು.

ಅವರು ದೇವರಬೆಳಕೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಯೋಜನೆ ವತಿಯಿಂದ ಹಮ್ಮಿ ಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಹಾಗೂ ಅಂಗವಿಕಲರಿಗೆ ವ್ಹೀಲ್‌ಚೇರ್ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ವೀರೇಂದ್ರ ಹೆಗ್ಗಡೆ ಅವರ ಚಿಂತನೆಗಳು ಜನಪರವಾಗಿದ್ದು, ಕೃಷಿ ಕ್ಷೇತ್ರದ ಜೊತೆಗೆ ಪರಿಸರ ಸಂರಕ್ಷಣೆಗೂ ಒತ್ತು ನೀಡಿದ್ದಾರೆ.

ಈ ಯೋಜನೆಯಿಂದ ರಾಜ್ಯದ ಎಲ್ಲಾ ಹಳ್ಳಿಗಳಲ್ಲೂ ಸಸಿ ನೆಡುವ ಕಾರ್ಯ ಸಾಗಿದ್ದು, ಲಾಕ್‌ಡೌನ್ ಸಂದರ್ಭದಲ್ಲಿ 8400 ಜನರಿಗೆ ಮಾಸಾಶನ ಮತ್ತು 10 ಸಾವಿರ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿದ್ದೇವೆ.


ರಾಜ್ಯದಲ್ಲಿ 5 ಲಕ್ಷ ಸ್ವಸಹಾಯ ಸಂಘಗಳನ್ನು ರಚಿಸಿದ್ದು, 50 ಲಕ್ಷ ಸದಸ್ಯರಿದ್ದಾರೆ. ಹರಿಹರ ತಾಲ್ಲೂಕಿನಲ್ಲಿ 4200 ಸಂಘಗಳಿದ್ದು, 35 ಸಾವಿರ ಸದಸ್ಯರಿದ್ದಾರೆ. ಇವರಿಗೆ ನಾವು ಸಾಲ ಸೌಲಭ್ಯ ಕಲ್ಪಿಸುವುದಕ್ಕೆ ಮುಖ್ಯವಾಗಿ ಬದುಕು, ಆರೋಗ್ಯದ ಬಗ್ಗೆ ಮತ್ತು ಮಾಹಿತಿಯಿಂದ ಉತ್ಪಾದನೆವರೆಗೆ ಅವರನ್ನು ತಯಾರು ಮಾಡಿದ ತೃಪ್ತಿ ನಮ್ಮ ಯೋಜನೆಗಿದೆ ಎಂದು ಯೋಜನಾಧಿಕಾರಿ ಗಣಪತಿ ಮುಳಂಜಿ ತಿಳಿಸಿದರು.

ಕೋವಿಡ್ -19ರ ಬಗ್ಗೆಯೂ ನಾವು ಜನ ಜಾಗೃತಿ ಕಾರ್ಯಕ್ರಮ ಮಾಡುತ್ತಿದ್ದೇವೆ. ಪರಿಸರ ಸ್ವಚ್ಛವಾಗಿದ್ದರೆ ಉತ್ತಮ ಆರೋಗ್ಯ ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ ನಡೆಯುವ ಯಾವುದೇ ಸಮಾರಂಭದ ಸವಿನೆನಪಿಗಾಗಿ ಗಿಡ ನೆಡುವುದನ್ನು ರೂಢಿಸಿಕೊಳ್ಳಿ ಎಂದು ಕೆ. ಬೇವಿನಹಳ್ಳಿ ವಲಯದ ಮೇಲ್ವಿಚಾರಕರಾದ ನಂದಾ ಮನವಿ ಮಾಡಿದರು.

ಗ್ರಾ.ಪಂ. ಅಧ್ಯಕ್ಷೆ ರಾಧಾ ಜುಂಜಪ್ಪ ಅಧ್ಯಕ್ಷತೆ ವಹಿಸಿದ್ದರು. ವೈದ್ಯಾಧಿಕಾರಿ ಡಾ. ದರ್ಶನಾ ಮಾತನಾಡಿದರು.

ಒಕ್ಕೂಟದ ಅಧ್ಯಕ್ಷೆ ಆಶಾ, ಉಪಾಧ್ಯಕ್ಷ ಮಂಜುನಾಥ್, ಪಿಡಿಓ ಶಿವಪ್ಪ ಬಿರಾದಾರ್, ಆರೋಗ್ಯ ಕೇಂದ್ರದ ಲ್ಯಾಬ್ ಟೆಕ್ನೀಷಿಯನ್ ಪೂಜಾ ಮತ್ತಿತರರು ಭಾಗವಹಿಸಿದ್ದರು.

## ನಗರದಲ್ಲಿ ಸಾಯಿ ಮಂದಿರದಲ್ಲಿ ಇಂದು ದರ್ಶನ ಇಲ್ಲ



ದಾವಣಗೆರೆ,ಜು.4- ನಗರದ ಎಂ.ಸಿ.ಸಿ. ಎ ಬ್ಲಾಕ್ ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ನಾಳೆ ದಿನಾಂಕ 5ರ ಭಾನುವಾರ ಶ್ರೀ ಬಾಬಾರವರ ದರ್ಶನ ಇರುವುದಿಲ್ಲ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ. ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಸರ್ಕಾರ ಆದೇಶಿಸಿರುವ ಜನತಾ ಕರ್ಫ್ಯೂ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ನಾಡಿದ್ದು ದಿನಾಂಕ 6ರ ಸೋಮವಾರ ಭಕ್ತರಿಗೆ ಶ್ರೀ ಸ್ವಾಮಿಯ ದರ್ಶನ ಪಡೆಯಲು ಅವಕಾಶ ಮಾಡಲಾಗಿದೆ ಎಂದು ಅವರು ವಿವರಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿ ವ್ಯಕ್ತಿಯ ಶವವನ್ನು ಬಸ್‌ನಿಲ್ದಾಣದಲ್ಲಿ ಬಿಟ್ಟ ಸಿಬ್ಬಂದಿ

ರಾಣೆಬೆನ್ನೂರು, ಜು. 4- ಅನಾರೋಗ್ಯದಿಂದ ಸಾವನ್ನಪ್ಪಿದ ವ್ಯಕ್ತಿಯೊಬ್ಬರ ಶವವನ್ನು ತಾಲ್ಲೂಕು ಆಸ್ಪತ್ರೆಯ ಸಿಬ್ಬಂದಿ ಬಸ್ ನಿಲ್ದಾಣದಲ್ಲಿಯೇ ಬಿಟ್ಟು ಹೋದ ಘಟನೆ ನಗರದ ತಾಲ್ಲೂಕು ಆಸ್ಪತ್ರೆಯ ಮುಂಭಾಗದಲ್ಲಿ ಶನಿವಾರ ನಡೆದಿದೆ.



ಇಲ್ಲಿನ ಮಾರುತಿ ನಗರದ ನಿವಾಸಿ ಚಂದ್ರಶೇಖರ ಎಂ. (45) ಎಂಬುವರು ಆರೋಗ್ಯದಲ್ಲಿ ಏರುಪೇರು ಕಂಡು ಬಂದ ಹಿನ್ನೆಲೆಯಲ್ಲಿ ನಗರದ ಹಲಗೇರಿ ರಸ್ತೆಯಲ್ಲಿರುವ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು. ಈ ವ್ಯಕ್ತಿಯ ಗಂಟಲು ದ್ರವವನ್ನು ಆರೋಗ್ಯ ಇಲಾಖೆಯ ಸಿಬ್ಬಂದಿ ಸಂಗ್ರಹಿಸಿದ್ದು, ಆತನ ವರದಿಗಾಗಿ ಆಸ್ಪತ್ರೆಯ ಸಿಬ್ಬಂದಿ ಕಾಯುತ್ತಿದ್ದರು. ಆದರೆ ಚಿಕಿತ್ಸೆ ಪಡೆದುಕೊಂಡ ವ್ಯಕ್ತಿ ಶನಿವಾರ ಮೃತಪಟ್ಟಿದ್ದರು.

ಶವವನ್ನು ಬಸ್‌ನಿಲ್ದಾಣದಲ್ಲಿ ಬಿಟ್ಟಿರುವುದು ಯಾಕೆ ಎಂಬುದು ನಿಗೂಢವಾಗಿದೆ. ಮೃತಪಟ್ಟ ವ್ಯಕ್ತಿಯ ಶವವನ್ನು ಮರಣೋತ್ತರ ಪರೀಕ್ಷೆ ನಡೆಸಿ ಮೃತನ ಕುಟುಂಬಕ್ಕೆ ಹಸ್ತಾಂತರ ಮಾಡಲಾಗಿದೆ ಎನ್ನುತ್ತಾರೆ ವೈದ್ಯರು. ಶವವನ್ನು ನೋಡಿ ರಸ್ತೆಯಲ್ಲಿ ಸಂಚರಿಸುತ್ತಿದ್ದ ಜನರು ಭಯಗೊಂಡು ಓಡಾಡುತ್ತಿರುವುದು ಕಂಡುಬಂದಿತು. ಕೂಡಲೇ ಎಚ್ಚೆತ್ತುಕೊಂಡ ಸಿಬ್ಬಂದಿ ಆಂಬ್ಯುಲೆನ್ಸ್‌ನಲ್ಲಿ ವ್ಯಕ್ತಿಯ ಶವವನ್ನು ತೆಗೆದುಕೊಂಡು ಹೋಗಿದ್ದಾರೆ. ಕೂಡಲೇ ಆರೋಗ್ಯ ಇಲಾಖೆ ಎಚ್ಚೆತ್ತುಕೊಂಡು ತನಿಖೆ ನಡೆಸಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

ಮೃತ ವ್ಯಕ್ತಿಯನ್ನು ಮರಣೋತ್ತರ ಪರೀಕ್ಷೆ ನಡೆಸಿ ಶವವನ್ನು ಅವರ ಕುಟುಂಬಕ್ಕೆ ಹಸ್ತಾಂತರ ಮಾಡಲಾಗಿದ್ದು, ಅಂತ್ಯಕ್ರಿಯೆ ಮಾಡಲಾಗಿದೆ. ಆದರೆ ಶವವನ್ನು ಆಸ್ಪತ್ರೆಯ ಮುಂಭಾಗದಲ್ಲಿ ಯಾರು ಇಟ್ಟರು ಎಂಬುದು ಗೊತ್ತಾಗಿಲ್ಲ ಎಂದು ಡಾ.ಸಂತೋಷಕುಮಾರ್ ಹೇಳಿದರು.

## ಗುರುವಿರಲಿ ಗುರಿ ತಲುಪೆ...

ಪುಸ್ತಕದಿ ಕಲಿತ ಪಾಠವದು
ಪುಸ್ತಕವ ಬರೆಯಲಿಕೆ ಚಂದ
ಅನುಭವದಿ ಕಲಿತ ಪಾಠವದು
ಜೀವನವ ಸಾಗಿಸಲು ಅಂದ.

ಗುರು ಕಲಿಸಿದ ಪಾಠವದು
ಗುಣಮಟ್ಟದತಿ ಉತ್ತಮವು
ಗುರಿಮುಟ್ಟಲು ದಿಕ್ಸೂಚಿಯದು
ಗುರುಕೃಪೆಯಿರಲು ಜಯವು ನಿಶ್ಚಿತವು.

ಸರ್ವರಲಿ ಅಡಗಿಹವು
ಪ್ರತಿಭೆಗಳು
ಗುರುವು ಗುರುತಿಸುವನು ಅವನು
ಹೊರಗೆಳೆದು ಅವೆಲ್ಲವನು.

ಶಿಷ್ಯನುನ್ನತಿಗೆ ಬೆಳಕಾಗುವನು
ಅವನು
ದಾರಿ ತೋರಿದಾ ಗುರುಗಳನು
ಮರೆಯಲಾಗದು ಎಂದಿಗೂ
ಹಣತೆಯಾ ಬತ್ತಿ ನೀನಾಗಿರಲು
ಬೆಳಗಿಸುವ ತೈಲವೇ ಅವರು!.

ಕೆಲವೊಮ್ಮೆ ಶಿಷ್ಯನಾಗಿ
ಕಲಿಯುವುದು
ಮತ್ತೊಮ್ಮೆ ಗುರುವಾಗಿ
ಕಲಿಸುವುದು
ಮಾನವ ಕುಲ ಧರ್ಮವದು
ಬಾಳಿನಾ ದೀರ್ಘ ದಾರಿಯೊಳು

**- ಅಣ್ಣಾಪುರ್ ಶಿವಕುಮಾರ್**
ಲಿಬರ್ಟಿವಿಲ್,
ಇಲಿನಾಯ್, ಯುಎಸ್‌ಎ.
ashivakumar@yahoo.com


## ಚಿರಸ್ಮರಣೆ




**ಅಂಗಡಿ ಮುರಿಗೆಪ್ಪನವರು**

ನಿಧನ : 21.07.2006

*ನೀವು ನಮ್ಮನ್ನಗಲಿ 14 ವರ್ಷಗಳು ಉರುಳಿದವು.*
*ನೀವು ಹಾಕಿಕೊಟ್ಟ ಮಾರ್ಗದಲ್ಲೇ ಮುನ್ನಡೆಯುತ್ತಿರುವ...*

ಮಗ : **ಎನ್.ಮಂಜುನಾಥ್, ಐ.ಎಸ್.ಸುಜನಾ**
ಮೊಮ್ಮಕ್ಕಳು : **ಆದರ್ಶ, ಐಶ್ವರ್ಯ,** ಹರಿಹರ.


## ಲಿಯಾಖತ್ ಅಲಿ ಸಾಬ್ ನಿಧನ



ದಾವಣಗೆರೆ ಚೌಕಿಪೇಟೆ, ಹೊಸ ಮಸೀದಿ ಹತ್ತಿರದ ವಾಸಿ, ಮುಸ್ಲಿಂ ಹಾಸ್ಟೆಲ್ ಮಾಜಿ ಮ್ಯಾನೇಜರ್ ಲಿಯಾಖತ್ ಅಲಿ ಸಾಬ್ (62) ಅವರು ದಿನಾಂಕ 4.7.2020ರ ಶನಿವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.7.2020ರ ಶನಿವಾರ ರಾತ್ರಿ 10 ಗಂಟೆಗೆ ಹಳೇ ಖಬರಸ್ತಾನದಲ್ಲಿ ನಡೆಯಿತು.

**ಮನೆಯಲ್ಲೇ ಇರಿ ಸುರಕ್ಷಿತವಾಗಿರಿ**

## ಮಲೇಬೆನ್ನೂರು : ಇಂದು ಕರ್ಫ್ಯೂ

ಮಲ್ಲೇಬೆನ್ನೂರು, ಜು. 4 - ಕೊರೊನಾ ಸೋಂಕು ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ರಾಜ್ಯ ಸರ್ಕಾರದ ಸೂಚನೆಯಂತೆ ಭಾನುವಾರ ಮಲೇಬೆನ್ನೂರು ಪಟ್ಟಣದಲ್ಲಿ ಕಟ್ಟುನಿಟ್ಟಿನ ಕರ್ಫ್ಯೂ ಜಾರಿಗೊಳಿಸಲಾಗುವುದೆಂದು ಪುರ ಸಭೆ ಮುಖ್ಯಾಧಿಕಾರಿ ಧರಣೇಂದ್ರ ಕುಮಾರ್ ತಿಳಿಸಿದ್ದಾರೆ. ಆಸ್ಪತ್ರೆ, ಮೆಡಿಕಲ್ ಷಾಪ್ ಹೊರತುಪಡಿಸಿ ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡುವಂತೆ ಈಗಾಗಲೇ ಸೂಚನೆ ನೀಡಲಾಗಿದೆ. ಅನಗತ್ಯ ಯಾರೇ ರಸ್ತೆಗೆ ಬಂದರೂ ಶಿಸ್ತು ಕ್ರಮ ಗ್ಯಾರೆಂಟಿ ಎಂದು ಅವರು ಎಚ್ಚರಿಸಿದ್ದಾರೆ.

## ರಾಶಿ ಭವಿಷ್ಯ

**ದಿನಾಂಕ : 05.07.2020 ರಿಂದ 11.07.2020**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ) (ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಬಂಧುಗಳಿಂದ ನಿರೀಕ್ಷಿಸಿದಷ್ಟು ಸಹಾಯ ದೊರಕದೇ ಹೋಗಬಹುದು. ಹೊಸ ಯೋಜನೆಯನ್ನು ತಾತ್ಕಾಲಿಕ ಮುಂದೂಡಿ. ಗುರುಗಳ ಅನ್ವೇಷಣೆಯಲ್ಲಿ ಸಾಧಕರಿಗೆ ಉತ್ತಮ ಗುರುಗಳು ಸಿಗಲಿದ್ದಾರೆ. ಸಂತೋಷ ಕೂಟದಲ್ಲಿ ಭಾಗವಹಿಸುವುದು ಬೇಡ. ಆಸ್ತಿ ಬಗ್ಗೆ ಹೆಚ್ಚಿನ ನಿರೀಕ್ಷೆ ಬೇಡ. ಸೋದರಿ ಕುಟುಂಬದಲ್ಲಿ ಮಂಗಳ ಕಾರ್ಯದಲ್ಲಿ ಭಾಗವಹಿಸುವಿರಿ. ಮೂಳೆಗಳಲ್ಲಿ ತೊಂದರೆ. ಮಡದಿ ಕಡೆಯಿಂದ ಆರ್ಥಿಕ ನೆರವು. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಸೋಮ, ಮಂಗಳ, ಗುರು ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2) (ಇ.ಉ.ಎ.ಒ.ವ.ವಿ.ವು.ವೆ.ವೋ)**

ವೈಯಕ್ತಿಕ ಸುಖ ಭೋಗಗಳ ಕಡೆ ಹೆಚ್ಚು ಗಮನ ಕೊಡುವುದರಿಂದ ನಷ್ಟವೇ ಹೆಚ್ಚು. ಅತಿ ಕೊಳ್ಳುಬಾಕತನದಿಂದ ಆರ್ಥಿಕ ಸಂಕಷ್ಟಕ್ಕೆ ಗುರಿ. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಸಕಾಲ. ಸರ್ಕಾರದಿಂದ ಬರಬೇಕಾಗಿರುವ ಹಣ ಇಷ್ಟರಲ್ಲೇ ಕೈ ಸೇರಲಿದೆ. ವೃತ್ತಿಯಲ್ಲಿ ಹಿತ ಶತ್ರುಗಳ ಉಪಟಳ ಹೆಚ್ಚು. ನವ ದಂಪತಿಗಳ ಸಂಸಾರದಲ್ಲಿ ಖಾಯಂ ಅತಿಥಿ ಆಗಮನ. ಮುಂಬಡ್ತಿ ಬಗ್ಗೆ ಚಿಂತೆ ಬೇಡ. ಭಾನು, ಬುಧ, ಶುಕ್ರ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3) (ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಆತ್ಮಗೌರವಕ್ಕೆ ಹೆಚ್ಚಿನ ಮಹತ್ವ ಕೊಡುವ ನಿಮ್ಮ ನೀತಿಯನ್ನು ಎಲ್ಲರೂ ಮೆಚ್ಚುವರು. ಬಂಧುಗಳಿಗೆ ಸಾಧ್ಯವಾದಷ್ಟು ಆರ್ಥಿಕ ಸಹಾಯ ಮಾಡಿ. ತಾಯಿಯ ತವರು ಮನೆಯವರಿಂದ ನೆರವು. ಮಕ್ಕಳು, ವಿದ್ಯಾರ್ಥಿಗಳು ಹೆಚ್ಚಿನ ಶ್ರಮ ಪಡದೆ ವಿಧಿಯಿಲ್ಲ. ನೀವು ತೋರಿದ ಅಲಕ್ಷೆ ಶತ್ರುಗಳು ಹೆಚ್ಚಾಗಲು ಕಾರಣ. ಹಣಕಾಸಿನ ವಿಚಾರದಲ್ಲಿ ಜಾಮೀನು ಬೇಡ. ಕೃಷಿಕ ಮಿತ್ರರಿಗೆ ಬಿಡವಿಲ್ಲದ ಕೆಲಸ. ಭಾನು, ಗುರು, ಶುಕ್ರ ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ) (ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಹಿರಿಯರ ಆರೋಗ್ಯದಲ್ಲಿನ ವ್ಯತ್ಯಾಸದಿಂದ ಚಿಂತೆ. ವೈದ್ಯಕೀಯ ವೆಚ್ಚ ಹೆಚ್ಚು. ಸೋದರಿಯ ಮದುವೆ ಮಾತುಕತೆ ಮುಂದುವರೆಯಲಿದೆ. ಅತಿಯಾದ ಭೋಜನ ಕೂಟದಿಂದ ಆರೋಗ್ಯದಲ್ಲಿ ವ್ಯತ್ಯಾಸ. ಸರ್ಕಾರಿ ಕೆಲಸಗಳು ಮಂದಗತಿಯಲ್ಲಿ ನಡೆಯಲಿವೆ. ನಿವೇಶನ ಖರೀದಿ ಮಾತುಕತೆ ನಡೆಸಲು ಅಡ್ಡಿಯಿಲ್ಲ. ವ್ಯಾಪಾರದಲ್ಲಿ ಪಾಲುದಾರಿಕೆ ಬೇಡ. ಮಹಿಳಾ ಉದ್ಯಮಿಗಳಿಗೆ ಸರ್ಕಾರಿ ಸವಲತ್ತು ದೊರೆಯಲಿದೆ. ಅನಿರೀಕ್ಷಿತ ಪುಣ್ಯಕ್ಷೇತ್ರಗಳ ದರ್ಶನ ಭಾಗ್ಯ ಒದಗಿ ಬರಲಿದೆ. ಭಾನು, ಸೋಮ, ಗುರು ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1) (ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಹೆಚ್ಚುತ್ತಿರುವ ಖರ್ಚಿನಿಂದ ಆರ್ಥಿಕ ಸಂಕಷ್ಟ. ವಿದ್ಯಾರ್ಥಿಗಳ ಆಲಸ್ಯದಿಂದ ಅಧ್ಯಯನದಲ್ಲಿ ಹಿನ್ನಡೆ. ಉನ್ನತಾಧಿಕಾರಿಗಳ ಜವಾಬ್ದಾರಿ ಹೆಚ್ಚಲಿದೆ. ಉದ್ಯೋಗದಲ್ಲಿ ಸ್ಥಾನಮಾನ ದೊರೆತರೂ ಅದರಿಂದೇನೂ ಪ್ರಯೋಜನವಿಲ್ಲ. ಆರೋಗ್ಯ ಸಮಸ್ಯೆ ಕಾಡಬಹುದು. ಅತಿ ದೂರ ಪ್ರಯಾಣ ಬೇಡ. ಅನಾವಶ್ಯಕ ವಸ್ತುಗಳ ಖರೀದಿ ಬೇಡ. ರಕ್ಷಣಾ ಇಲಾಖೆಯಲ್ಲಿರುವವರಿಗೆ ವೇತನದಲ್ಲಿ ಹೆಚ್ಚಳ. ಖರ್ಚೂ ಕೂಡ ಹೆಚ್ಚಾಗಲಿದೆ. ಹಳೆಯ ಮಿತ್ರರ ಭೇಟಿಯಾಗಲಿದೆ. ಭಾನು, ಮಂಗಳ, ಬುಧ ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2) (ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಅನಾವಶ್ಯಕವಾಗಿ ಬಂಧುಗಳೊಂದಿಗೆ ವಾಗ್ವಾದ ಉಂಟಾಗಲಿದೆ. ಎಚ್ಚರದಿಂದಿರಿ. ನಿಂತು ಹೋಗಿದ್ದ ಆದಾಯದಲ್ಲಿ ಚೇತರಿಕೆ ಕಂಡುಬರಲಿದೆ. ಸೋದರಿ ಮನೆಯಲ್ಲಿ ನಡೆಯುವ ಮಂಗಳ ಕಾರ್ಯಕ್ಕೆ ಕುಟುಂಬ ಸಮೇತ ಭಾಗವಹಿಸುವಿರಿ. ವಿದ್ಯಾರ್ಥಿಗಳು ಅಧ್ಯಯನ ವಿಷಯದಲ್ಲಿನ ಬೇಜವಾಬ್ದಾರಿತನದಿಂದ ಯಶಸ್ಸಿಗೆ ಧಕ್ಕೆಯಾಗಬಹುದು. ಮಂಡಿ ನೋವು, ಕೀಲು ನೋವು ಬಾಧಿಸಬಹುದು. ಸೋಮ, ಬುಧ, ಗುರು ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3) (ರ.ರಿ.ರು.ರೆ.ರೊ.ತ.ತಿ.ತು.ತೆ.)**

ಮತ್ತೊಬ್ಬರು ನೀಡಬಹುದಾದ ಸಹಾಯ ಅವಲಂಬಿಸಿ ಕಾರ್ಯ ಹಮ್ಮಿಕೊಳ್ಳಬೇಡಿ. ಮಧ್ಯದಲ್ಲಿ ಕುಂಟು ನೆಪ ಹೇಳಿ ತಪ್ಪಿಸಿಕೊಳ್ಳುವವರು. ನಂಬಿದ್ದ ಸಹೋದ್ಯೋಗಿಗಳಿಂದಲೇ ತೊಂದರೆ. ಮಾನಸಿಕ ಗೊಂದಲಗಳಿಂದಾಗಿ ಅನೇಕ ಅವಕಾಶ ಕೈ ತಪ್ಪಿ ಹೋಗಬಹುದು. ಆತ್ಮ ವಿಶ್ವಾಸದಿಂದ ಜೀವನದಲ್ಲಿ ಮುನ್ನಡೆಯಿರಿ. ಮಡದಿ, ಮಕ್ಕಳ ನಡಾವಳಿಯಲ್ಲಿ ಕಂಡು ಬರುವ ವ್ಯತ್ಯಾಸ ನಿಮಗೆ ಸಖೇತಾದಾಶ್ಚರ್ಯ ಉಂಟು ಮಾಡಲಿದೆ. ಆದಾಯದಲ್ಲಿ ಸಾಕಷ್ಟು ಕೊರತೆ ಕಾಣಲಿದೆ. ಕೊಟ್ಟ ಸಾಲ ಮರಳಿ ಬರದೇ ಸಾಲಗಾರರಾಗುವ ಸಂಭವ. ನೆರೆಹೊರೆ ಯವರೊಂದಿಗೆ ಸೌಹಾರ್ದತೆಯಿಂದಿರಿ. ಸೋಮ, ಬುಧ, ಶುಕ್ರ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ) (ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಬಂಧುಗಳ ಮಧ್ಯದಲ್ಲಿರುವ ಭಿನ್ನಾಭಿಪ್ರಾಯದಲ್ಲಿ ಪ್ರವೇಶ ಬೇಡ. ಇದರಿಂದ ಅಪಕೀರ್ತಿ, ಅಪಮಾನವಾಗಲಿದೆ. ಮಾಡುವ ಕೆಲಸದಲ್ಲಿ ಉತ್ಸಾಹವಿದ್ದರೂ ದೇಹಾಲಸ್ಯ ಅದಕ್ಕೆ ಸ್ಪಂದಿಸದೇ ಹೋಗಬಹುದು. ಆರೋಗ್ಯ ವಿಷಯದಲ್ಲಿರುವ ಅಲಕ್ಷೆಯಿಂದ ಶಸ್ತ್ರ ಚಿಕಿತ್ಸೆಗೆ ಕಾರಣವಾಗಬಹುದು. ಆದಾಯದಲ್ಲಿ ಕೊರತೆ ಕಂಡು ಬರಲಿದೆ. ಗುರುತರ ಜವಾಬ್ದಾರಿ ಹೆಗಲೇರಲಿದೆ. ಅದನ್ನು ನಿಭಾಯಿಸಲು ಮುಂದಾಲೋಚನೆ ಮಾಡಿ. ಮಕ್ಕಳ ಸಂಪೂರ್ಣ ಸಹಕಾರ ಸಿಗಲಿದೆ. ಮಡದಿಯ ಕೋಪ ತಾತ್ಕಾಲಿಕ. ಕೊಟ್ಟ ಸಾಲ ಸದ್ಯದ ಪರಿಸ್ಥಿತಿಯಲ್ಲಿ ಮರಳುವುದು ಅನುಮಾನ. ಭಾನು, ಮಂಗಳ, ಬುಧ ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ) (ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಸೋದರನೊಂದಿಗೆ ಇದ್ದ ತಪ್ಪು ತಿಳುವಳಿಕೆಯಿಂದ ಭಿನ್ನಾಭಿಪ್ರಾಯ. ಸಾಧ್ಯವಾದಷ್ಟು ಅವಕಾಶ ಕೊಡಬೇಡಿ. ಚಾಡಿ ಮಾತುಗಳಿಂದ ಮತ್ತೊಬ್ಬರ ಬಗ್ಗೆ ಸಂಶಯ ಪಡುವುದು ಮೂರ್ಖತನ. ಆದಾಯದಷ್ಟೇ ಖರ್ಚು ಕೂಡಾ ಇರುವುದರಿಂದ ಉಳಿತಾಯ ಅಸಾಧ್ಯ. ಆಧ್ಯಾತ್ಮದ ಕಡೆ ಒಲವು ಹೆಚ್ಚಾಗಲಿದೆ. ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅದ್ಭುತ ಸಾಧನೆ ಕಂಡು ಬರಲಿದೆ. ಕ್ರೀಡಾಪಟುಗಳಿಗೆ ಉತ್ತಮ ಅವಕಾಶ ದೊರೆಯುವುದು. ಸರ್ಕಾರಿ ಕೆಲಸಗಳು ಶಿಫಾರಸ್ಸಿನಿಂದ ಸಾಧ್ಯ ಎಂಬುದು ನೆನೆಪಿಡಿ. ಆರೋಗ್ಯದ ವಿಷಯದಲ್ಲಿ ಅದರಲ್ಲೂ ಮೂತ್ರ ಸಂಬಂಧಿ ಸಮಸ್ಯೆ ಅಲಕ್ಷಿಸಬೇಡಿ. ಹೂವು, ತರಕಾರಿ, ಹೈನುಗಾರಿಕೆ ಹೆಚ್ಚಿನ ಲಾಭ ತರಲಿದೆ. ಸೋಮ, ಗುರು, ಶನಿ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2) (ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಏನೇ ಸಮಸ್ಯೆಯಿರಲಿ ಆತ್ಮ ವಿಶ್ವಾಸ ಕಳೆದುಕೊಳ್ಳಬೇಡಿ. ಹಣದ ಹರಿವು ಕಡಿಮೆಯಿದ್ದರೂ ಚಿಂತೆ ಬೇಡ. ವಿದ್ಯಾರ್ಥಿಗಳು ಉತ್ತಮ ಸಾಧನೆಗೆ ದೊರೆಯುವ ಅವಕಾಶ ಬಳಸಿಕೊಳ್ಳಿ. ಪ್ರವಚನಕಾರರಿಗೆ ಬೇಡಿಕೆ ಹೆಚ್ಚಲಿದೆ. ಕ್ರೀಡಾಪಟುಗಳಿಗೆ ಸರ್ಕಾರದಿಂದ ಸೌಲಭ್ಯ ದೊರೆಯಲಿದೆ. ಪ್ರೇಮಿಗಳಿಗೆ ಎಲ್ಲವೂ ಅಂದುಕೊಂಡಂತೆ ನಡೆಯುತ್ತದೆ ಎಂಬ ಭ್ರಮೆ ಬೇಡ. ಕಣ್ಣಿನ ಆರೋಗ್ಯದ ಕಡೆ ಹೆಚ್ಚಿನ ಗಮನ ಕೊಡಿ. ಲೇವಾದೇವಿ ವ್ಯವಹಾರದಲ್ಲಿ ತುಸು ನಷ್ಟ. ಹಿರಿಯರಿಂದ ಸಹಾಯ. ಬುಧ, ಶುಕ್ರ, ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3) (ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಹಿರಿಯರ ನಡಾವಳಿ ಬಗ್ಗೆ ವ್ಯಾಖ್ಯಾನ ಬೇಡ. ಮಕ್ಕಳ ಪರೀಕ್ಷಾ ಫಲಿತಾಂಶ ಉತ್ತಮ. ಕೃಷಿ ಉತ್ಪನ್ನಗಳಿಗೆ ಬೆಲೆ ಎಂದಿನಂತೆ ಇರಲಿದೆ. ಆದಾಯ ಸಾಧಾರಣವಾಗಿರುವುದು. ಅದಕ್ಕೆ ತಕ್ಕಂತೆ ಖರ್ಚು ಮಾಡುವುದು ಲೇಸು. ಅವಿವಾಹಿತರಿಗೆ ಕಂಕಣ ಭಾಗ್ಯ. ಬಂದಿದ್ದ ಉದ್ಯೋಗಾವಕಾಶ ಕೈ ತಪ್ಪಿಹೋಗುವ ಸಂಭವ. ಮಡದಿ ಆರೋಗ್ಯದ ಬಗ್ಗೆ ಅಲಕ್ಷೆ ಬೇಡ. ಸ್ವಯಂ ವೈದ್ಯಕೀಯ ಚಿಕಿತ್ಸೆ ಬೇಡ. ಮಾಡುವ ಕೆಲಸದಲ್ಲಿ ಚುರುಕಾಗಿರಿ. ಸ್ನೇಹಿತರು ಸಹಾಯ ಕೋರಿ ಬರಲಿದ್ದಾರೆ. ಯಥಾಶಕ್ತಿ ನೆರವು ನೀಡಿ. ಸೋಮ, ಗುರು, ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ) (ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ನಾನೇ ಎಲ್ಲವನ್ನೂ ಮಾಡಬಲ್ಲೆ. ಎಲ್ಲವೂ ನನ್ನಿಂದಲೇ ಎಂಬ ಅಹಮಿಕೆ ಯಿಂದ ಏಳಿಗೆಯಲ್ಲಿ ಕುಂಠಿತ. ಒರಟು ಮಾತುಗಳಿಂದ ಬಂಧುಗಳು ನಿಮ್ಮಿಂದ ದೂರವಾದಾರು. ಪಿತ್ರಾರ್ಜಿತ ಆಸ್ತಿ ವಿಂಗಡಣೆ ವಿಚಾರ ಮತ್ತೆ ಮುಂದೆ ಹೋಗು ವುದು. ಉದ್ಯಮಿಗಳು ನೌಕರರೊಂದಿಗೆ ಒರಟಾಗಿ ನಡೆದುಕೊಳ್ಳುವುದರಿಂದ ವಿರೋಧ ಕಟ್ಟಿಕೊಳ್ಳಬೇಕಾದೀತು. ಮಗಳ ಸಂಸಾರದಲ್ಲಿ ಹೊಂದಾಣಿಕೆ ಮೂಡಲಿದೆ. ಚಿತ್ತ ಚಾಂಚಲ್ಯದಿಂದಾಗಿ ವ್ಯವಹಾರದಲ್ಲಿ ನಷ್ಟ. ವಾಹನ ಚಲಾಯಿಸುವಾಗ ಎಚ್ಚರದಿಂದಿರಿ. ಆರೋಗ್ಯದಲ್ಲಿ ಸುಧಾರಣೆ. ಸೋಮ, ಮಂಗಳ, ಗುರು ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ : 05.07.2020 ಹುಣ್ಣಿಮೆ. ಗುರುಪೌರ್ಣಿಮಾ, ವ್ಯಾಸ ಜಯಂತಿ ( ಈ ದಿನದ ಗ್ರಹಣವು ನಮ್ಮ ದೇಶದಲ್ಲಿ ಕಾಣದೇ ಇರುವುದರಿಂದ ಆಚರಣೆಯಿಲ್ಲ.) 8.7.2020 ಬುಧವಾರ ಸಂಕಷ್ಟ ಚತುರ್ಥಿ. ಚಂದ್ರೋದಯ ರಾತ್ರಿ 9.50 ಕ್ಕೆ.**

# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜುಲೈ 05, 2020




ನೋಂದಣಿ ಸಂಖ್ಯೆ : ಡಿಆರ್/ ಡಿವಿಜಿ/ ಆರ್‌ಎಸ್‌ಆರ್/ 42877/2018-19 ದಿ: 14.12.2018

**ಶ್ರೀಸಾಮಾನ್ಯ ನೌಕರರ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ನಿ.**

ಸಹಕಾರಂ ಗೆಲ್ಗೆ, ಸಹಕಾರಂ ಬಾಳ್ಗೆ.

# 496/66, ಮಳಿಗೆ ಸಂಖ್ಯೆ : 03, ಸಂಕೋಳ್ ಪ್ಲಾಜಾ, ನಾಗನೂರು ರಸ್ತೆ ಶಾಮನೂರು, ದಾವಣಗೆರೆ.

Email ID: ssehcsdvg2017@gmail.com Mobile No: 76763 04095 95132 13355, 78928 42480

ಕ್ರ.ಸಂ./ ನಿ.ಪ.ಪ್ರಕಟಣೆ/03/2020-2021 ದಿನಾಂಕ: 04.07.2020

**-: ಸೂಚನಾ ಪತ್ರ :-**

ಶ್ರೀಸಾಮಾನ್ಯ ನೌಕರರ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ (ರಿ) ಶಾಮನೂರು ವತಿಯಿಂದ ಪ್ರಥಮ ಹಂತದ ಮುಂದುವರೆದ ಭಾಗವಾಗಿ **ಬನಶಂಕರಿ ಬಡಾವಣೆಗೆ ಹೊಂದಿಕೊಂಡಂತೆ ಶಿರಮಗೊಂಡನಹಳ್ಳಿ** ಸರಳ ಕಂತಿನ ಪಾವತಿ ಯೋಜನೆಯಡಿ, ನೌಕರರಿಗಾಗಿ ಬಡಾವಣೆ ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದು, ಸದರಿ ಬಡಾವಣೆಯಲ್ಲಿ ನಿವೇಶನ ಪಡೆಯಲಿಚ್ಛಿಸುವ ಆಸಕ್ತ ನೌಕರರು ಈ ಕೆಳಕಂಡ ದಿನಾಂಕದ ಒಳಗಾಗಿ ಸೊಸೈಟಿಯ ಕಛೇರಿ ಸಮಯದಲ್ಲಿ ಭೇಟಿ ನೀಡಿ ನಿವೇಶನ ಅರ್ಜಿಯನ್ನು ಪಡೆಯಲು ಹಾಗೂ ಕಂತುಗಳ ರೂಪದಲ್ಲಿ ನಿವೇಶನದ ಪ್ರಥಮ ಕಂತಿನ ಮೊತ್ತವನ್ನು ಪಾವತಿಸಲು ಅವಕಾಶವಿರುವುದರಿಂದ, ನೌಕರರು ಈ ಸೌಲಭ್ಯ ಸದುಪಯೋಗ ಪಡೆದುಕೊಳ್ಳಲು ಈ ಮೂಲಕ ಕೋರಿದೆ.

**ಸೀಮಿತ ನಿವೇಶನಗಳು ಮಾತ್ರ ಲಭ್ಯವಿದ್ದು ನಿವೇಶನಗಳ ಲಭ್ಯತೆಯು ಮೊದಲು ಅರ್ಜಿ ಸಲ್ಲಿಸಿದವರಿಗೆ ಮೊದಲ ಆದ್ಯತೆ ರೂಪದಲ್ಲಿರುತ್ತದೆ.**

| | |
|---|---|
| ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ | 12-07-2020 |
| ನಿವೇಶ ಮುಂಗಡ (ಪ್ರಥಮ) ಕಂತಿನ ಪಾವತಿಗೆ ದಿನಾಂಕ | 23-07-2020 |
| ಉದ್ದೇಶಿತ ಬಡಾವಣೆಯಲ್ಲಿ ಲಭ್ಯವಿರುವ ನಿವೇಶಗಳ ಅಳತೆ | 30x40 30x50 40x50 40x60 |

ಆಸಕ್ತರು ನೌಕರರು ಹೊಸ ಷೇರು ಹಾಗೂ ನಿವೇಷನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಈ ಸದಾವಕಾಶವನ್ನು ಬಳಸಿಕೊಳ್ಳಲು ಕೋರಿದೆ.

ದೂರವಾಣಿ ಸಂಖ್ಯೆ: 74838 27369, 99168 19661, 98458 79102, 76763 04095, 95132 13355, 94818 68989,

ತಮ್ಮ ನಂಬುಗೆಯ

ವಂದನೆಗಳೊಂದಿಗೆ

ಕವಿತಾ ಎಚ್.ಎನ್, ಕಾರ್ಯದರ್ಶಿ

ಶ್ರೀಸಾಮಾನ್ಯ ನೌಕರರ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ನಿ. ದಾವಣಗೆರೆ.





## ಹರಪನಹಳ್ಳಿಯಲ್ಲಿ ಕಾಂಗ್ರೆಸ್ ಪ್ರತಿಜ್ಞಾ ವಿಧಿ ಕಾರ್ಯಕ್ರಮ ವೀಕ್ಷಣೆ



ಹರಪನಹಳ್ಳಿ, ಜು.4- ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ನೂತನ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಕಾರ್ಯಾಧ್ಯಕ್ಷರುಗಳಾದ ಸತೀಶ್ ಜಾರಕಿಹೊಳಿ, ಸಲೀಂ ಅಹಮದ್, ಈಶ್ವರ ಖಂಡ್ರೆ ಅವರ ಅಧಿಕಾರ ಪದಗ್ರಹಣದ ಪ್ರತಿಜ್ಞಾ ವಿಧಿ ಕಾರ್ಯಕ್ರಮವನ್ನು ಹರಪನಹಳ್ಳಿ ಪಟ್ಟಣದಲ್ಲಿ ತಾಲ್ಲೂಕು ಎನ್. ಎಸ್.ಯು. ಐ ಕಾರ್ಯಕರ್ತರು ಮತ್ತು ಕಾಂಗ್ರೆಸ್ ಪಕ್ಷದ ವಿವಿಧ ಹಂತಗಳ ಪ್ರಮುಖ ನಾಯಕರು ಜಂಟಿಯಾಗಿ ನೇರ ಪ್ರಸಾರದ ಮೂಲಕ ವೀಕ್ಷಣೆ ಮಾಡಿ ನೂತನ ಪದಾಧಿಕಾರಿಗಳಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರುಗಳಾದ ಎಂ.ವಿ.ಅಂಜಿನಪ್ಪ, ಡಿ. ರಹಿಮಾನ್ ಸಾಬ್, ಟಿ. ವೆಂಕಟೇಶ್, ಗೊಂಗಡಿ ನಾಗರಾಜ, ಚಿಕ್ಕೇರಿ ಬಸಪ್ಪ, ಮಾಜಿ ಪುರಸಭೆ ಸದಸ್ಯ ಹೆಚ್.ವಸಂತಪ್ಪ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಟಿ.ಹೆಚ್.ಎಂ ಮಂಜುನಾಥ, ಕೆ.ಪಿ.ಸಿ.ಸಿ ಪರಿಶಿಷ್ಟ ಪಂಗಡ ವಿಭಾಗದ ಪ್ರಧಾನ ಕಾರ್ಯದರ್ಶಿ ಟಿ.ಮಂಜುನಾಥ, ಕೆ.ಪಿ.ಸಿ.ಸಿ ಸಾಮಾಜಿಕ ಜಾಲತಾಣ ಸಂಚಾಲಕ ಎಲ್. ಮಂಜಾನಾಯ್ಕ, ಮಾನವ ಬಂಧುತ್ವ ವೇದಿಕೆ ಜಿಲ್ಲಾ ಉಸ್ತುವಾರಿ ಇರ್ಫಾನ್ ಮುದಗಲ್ ಉಪಸ್ಥಿತರಿದ್ದರು.

ಕಾಂಗ್ರೆಸ್ ಪಕ್ಷದ ಮುಖಂಡರುಗಳಾದ ವಾಗೀಶ್ ರಾಯದುರ್ಗ, ಅಂಜಿನಿ, ತಿಮ್ಮಲಾಪುರ ಈಶ್ವರಪ್ಪ, ಎನ್.ಎಸ್.ಯು.ಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಡಿ. ಜೀಷಾನ್, ತಾಲ್ಲೂಕು ಅಧ್ಯಕ್ಷ ಶ್ರೀಕಾಂತ ಯಾದವ್, ಉಪಾಧ್ಯಕ್ಷ ಡಂಕಿ ವಾಸೀಂ, ಪ್ರಧಾನ ಕಾರ್ಯದರ್ಶಿ ಎಸ್. ಸಾಧಿಕ್, ಕಾರ್ಯದರ್ಶಿ ಮೋಹನ್‌ಕುಮಾರ್, ಬಿ. ಅಮೀರ್ ಸೊಹೈಲ್, ಸಹಕಾರ್ಯದರ್ಶಿ ಅಬುಸಾಲೇಹ, ಗಣೇಶ. ಎಲ್. ನಾಗರಾಜ, ಎಂ. ದೊರೆ ಬಂಜಾರ, ಬೀರೇಶ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಜಿಗಳಿ: ಪ್ರತಿಜ್ಞಾ ದಿನ ಕಾರ್ಯಕ್ರಮ



ಮಲೇಬೆನ್ನೂರು, ಜು.4- ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ. ಶಿವಕುಮಾರ್, ಕಾರ್ಯಾಧ್ಯಕ್ಷರಾಗಿ ಸತೀಶ್ ಜಾರಕಿಹೊಳಿ, ಈಶ್ವರ್ ಖಂಡ್ರೆ, ಸಲೀಂ ಅಹ್ಮದ್ ಅವರು ಅಧಿಕಾರ ಸ್ವೀಕರಿಸಿದ ಪ್ರತಿಜ್ಞಾ ದಿನ ಕಾರ್ಯಕ್ರಮವನ್ನು ಜಿಗಳಿ ಗ್ರಾಮದಲ್ಲಿ ಕಾಂಗ್ರೆಸ್ ಮುಖಂಡರು, ಕಾರ್ಯರ್ತರು ಹಾಗೂ ಅಭಿಮಾನಿಗಳು ವೀಕ್ಷಿಸಿದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಎಂ. ದೇವೇಂದ್ರಪ್ಪ, ಗ್ರಾ.ಪಂ. ಸದಸ್ಯ ಡಿ.ಎಂ. ಹರೀಶ್, ಡಿ. ಮಂಜುನಾಥ್, ಬಿ. ಸೋಮಶೇಖರಚಾರಿ, ಕೆ.ಎಸ್. ನಂದ್ಯೆಪ್ಪ, ಪಿ. ಶಾಂತರಾಜ್, ಕಮದೋಡ ಬಸಪ್ಪ, ಹದಡಿ ರೇವಣಪ್ಪ, ನಿಂಗಪ್ಪ, ಕೆ.ಎನ್. ಬಸವರಾಜ್, ಮಾಕನೂರು ಶಿವು ಹೆಚ್. ವೀರೇಶ್ ಸೇರಿದಂತೆ ಅನೇಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ನಗರದಲ್ಲಿ ಇಂದು ಶ್ರೀ ಉತ್ಸವಾಂಬ ದೇವಿಗೆ ಮಹಾಮಂಡಲಾಭಿಷೇಕ



ಪಿ. ಹಾಲೇಶಪ್ಪ (ವಸಂತ ರಸ್ತೆ) ರಸ್ತೆಯಲ್ಲಿರುವ ಶ್ರೀ ಉತ್ಸವಾಂಭ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಆದಿಶಕ್ತಿ ದೇವಿ, ಶ್ರೀ ಗಣೇಶ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ 8ನೇ ವರ್ಷದ ಮಹಾಮಂಡಲಾಭಿಷೇಕವು ಇಂದಿನಿಂದ ಬರುವ ಆಗಸ್ಟ್ 19ರವರೆಗಿನ 48 ದಿನಗಳ ಕಾಲ ದೇವರಿಗೆ ಸರ್ವ ಭಕ್ತಾದಿಗಳಿಂದ ಮಹಾಭಿಷೇಕವಿರುತ್ತದೆ.














## ಜಗಳೂರು : ನಿರ್ದೇಶಕರಾಗಿ ಮಹೇಶ್



ಜಗ ಳೂರು, ಜು.4- ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾಗಿ ಬಿ.ಮಹೇಶ್ವರಪ್ಪ ಅವರು ಮೊನ್ನೆ ಅಧಿಕಾರ ವಹಿಸಿಕೊಂಡರು. ಆರ್. ಅಶೋಕ್ ಅವರು ನಿವೃತ್ತಿಯಾಗಿದ್ದರಿಂದ ಈ ಹುದ್ದೆ ತೆರವಾಗಿತ್ತು. ಜಗಳೂರು ತಾ॥ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಹುದ್ದೆಯೊಂದಿಗೆ ಸಹಾಯಕ ನಿರ್ದೇಶಕರಾಗಿ ಮಹೇಶ್ ಅವರು ಕಾರ್ಯ ನಿರ್ವಹಿಸುವರು.



# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜುಲೈ 05, 2020




# ತಾಯಿ-ಮಕ್ಕಳ ಮರಣ ಸಂಖ್ಯೆ ಇಳಿಕೆಗೆ ಕ್ರಮ

## 100 ಹಾಸಿಗೆಗಳ ತಾಯಿ-ಮಕ್ಕಳ ಆಸ್ಪತ್ರೆಗೆ ಭೂಮಿಪೂಜೆ ನೆರವೇರಿಸಿದ ಸಚಿವ ಶ್ರೀರಾಮುಲು

ದಾವಣಗೆರೆ, ಜು. 4 - ತಾಯಿ ಮತ್ತು ಮಕ್ಕಳ ಮರಣ ಪ್ರಮಾಣ ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮ ತೆಗೆದುಕೊಳ್ಳುತ್ತಿವೆ ಎಂದಿರುವ ಆರೋಗ್ಯ ಸಚಿವ ಶ್ರೀರಾಮುಲು, ಇದಕ್ಕಾಗಿಯೇ ತಾಯಿ -ಮಕ್ಕಳ ಆಸ್ಪತ್ರೆಗಳನ್ನು ನಿರ್ಮಿಸಲಾಗುತ್ತಿದೆ ಎಂದಿದ್ದಾರೆ.

ಶನಿವಾರ ನಗರದ ಚಿಗಟೇರಿ ಜಿಲ್ಲಾಸ್ಪತ್ರೆ ಆವರಣದಲ್ಲಿ ಕೇಂದ್ರ ಹಾಗೂ ರಾಜ್ಯಗಳ ಸಹಭಾಗಿತ್ವದಲ್ಲಿ ಸುಮಾರು ರೂ. 21 ಕೋಟಿ ವೆಚ್ಚದಲ್ಲಿ 100 ಹಾಸಿಗೆಗಳ ಸಾಮರ್ಥ್ಯದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಜೊತೆಗೆ ವೈದ್ಯರು/ ಶುಶ್ರೂಷಕರ ವಸತಿ ಗೃಹ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದ ಸಂದರ್ಭದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಆರೋಗ್ಯ ಅಭಿಯಾನ, ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಂಜಿನಿಯರಿಂಗ್ ಘಟಕ ದಾವಣಗೆರೆ ಇವರ ವತಿಯಿಂದ ಚಿಗಟೇರಿ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ 100 ಹಾಸಿಗೆಗಳ ತಾಯಿ ಮಕ್ಕಳ ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನಾ ಸಮಾರಂಭದ ಕಾರ್ಯಕ್ರಮ ಆಯೋಜಿಸಲಾಗಿತ್ತು.

ತಾಯಿ ಮತ್ತು ಮಕ್ಕಳ ಮರಣ ಪ್ರಮಾಣವನ್ನು ತಗ್ಗಿಸಲು ರಾಜ್ಯದಲ್ಲಿ ಪ್ರಸ್ತುತ 17 ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿವೆ. ದಾವಣಗೆರೆ ಸುತ್ತಮುತ್ತಲಿನ ಜನತೆಗೆ ಅನುಕೂಲವಾಗುವ ಉದ್ದೇಶದಿಂದ ಸಂಸದರಾದ ಜಿ.ಎಂ.ಸಿದ್ದೇಶ್ವರ ಅವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ದಾವಣಗೆರೆ ಜಿಲ್ಲೆಗೆ ಒಂದು ತಾಯಿ ಮತ್ತು ಮಕ್ಕಳ ಆಸ್ಪತ್ರೆ ಬೇಕೆಂದು ಮಂಜೂರು ಮಾಡಿಸಿದ್ದಾರೆ ಎಂದು ಹೇಳಿದರು. ಈ ಆಸ್ಪತ್ರೆಯ ಕಾಮಗಾರಿಯನ್ನು ನಿಗದಿತ 15 ತಿಂಗಳ ಒಳಗೆ ಮುಗಿಸಿ ನಂತರ ಸಂಸದರು, (6ನೇ ಪುಟಕ್ಕೆ)

## ಕೊರೊನಾ : ಶ್ವೇತಪತ್ರಕ್ಕೆ ಸರ್ಕಾರ ಸಿದ್ಧ

ದಾವಣಗೆರೆ, ಜು. 4 - ಕೊರೊನಾ ವೆಚ್ಚಕ್ಕೆ ಸಂಬಂಧಿಸಿದಂತೆ ಶ್ವೇತ ಪತ್ರ ಹೊರಡಿಸಲು ಸಿದ್ಧ ಎಂದಿರುವ ಆರೋಗ್ಯ ಸಚಿವ ಶ್ರೀರಾಮುಲು, ಕಾಂಗ್ರೆಸ್ ಮಾಹಿತಿ ಹಕ್ಕು ಅರ್ಜಿಯಡಿ ವಿವರ ಪಡೆದು ತನಿಖೆ ನಡೆಸಿಕೊಳ್ಳಲಿ ಎಂದು ಸವಾಲೆಸೆದಿದ್ದಾರೆ.

ಸರ್ಕಾರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಕೊರೊನಾ ವಿರುದ್ಧದ ಹೋರಾಟದಲ್ಲಿ ಯಾವುದೇ ಹೊಂದಾಣಿಕೆ ಇಲ್ಲ. ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಾವೆಲ್ಲರೂ ಕೆಲಸ ಮಾಡುತ್ತಿದ್ದೇವೆ ಎಂದಿದ್ದಾರೆ.

**ಪ್ರಚಾರಕ್ಕಾಗಿ ಸಿದ್ದರಾಮಯ್ಯ ಆರೋಪ : ಶ್ರೀರಾಮುಲು**

ಕುಣಿಯಲು ಬಾರದವನು ನೆಲ ಡೊಂಕು ಎಂದಂತೆ ಸಿದ್ದರಾಮಯ್ಯ ಅವರು ಆರೋಪ ಮಾಡುತ್ತಿದ್ದಾರೆ ಎಂದು ಲೇವಡಿ ಮಾಡಿದ ಸಚಿವರು, ಅವರಲ್ಲಿ ಶಕ್ತಿ ಇದ್ದರೆ ತನಿಖೆ ಮಾಡಲಿ. ನಾವು ತನಿಖೆಗೆ ಸಿದ್ಧ ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾಗಿ ಅನುಭವ ಹೊಂದಿರುವವರು. ಅವರು ಈ ರೀತಿ ಆಧಾರ ರಹಿತ ಆರೋಪ ಮಾಡಬಾರದು. ಆದರೆ, ಅವರು ಪ್ರಚಾರಕ್ಕಾಗಿ ಆರೋಪ ಮಾಡುತ್ತಿದ್ದಾರೆ. ನಾವು ಮಾಡಿರುವ ಪ್ರತಿ ಪೈಸೆ ವೆಚ್ಚಕ್ಕೂ ಲೆಕ್ಕ ಇದೆ ಎಂದು ಶ್ರೀರಾಮುಲು ಹೇಳಿದರು.

ಕೊರೊನಾ ವೈರಸ್ ವಿರುದ್ಧ ಹೋರಾಟದಲ್ಲಿ ಹಲವಾರು ಸಂಘ ಸಂಸ್ಥೆಗಳು ಸರ್ಕಾರದ ಜೊತೆ ಕೈ ಜೋಡಿಸಿವೆ. ಆದರೆ, ಕಾಂಗ್ರೆಸ್ ಕಾರ್ಯಕರ್ತರು ಹಾಗೂ ನಾಯಕರು ದೂರ ಇದ್ದಾರೆ. ಅವರು ಕೂಡ ಸರ್ಕಾರದ ಜೊತೆ ಕೈ ಜೋಡಿಸಬೇಕು. ಅದನ್ನು ಬಿಟ್ಟು ಈ ರೀತಿಯ ಆರೋಪ ಮಾಡುವುದು ಶೋಭೆ ತರುವುದಿಲ್ಲ ಎಂದು ಸಚಿವರು ತಿಳಿಸಿದರು. ಕೊರೊನಾ (7ನೇ ಪುಟಕ್ಕೆ)

## ಖಾಸಗಿ ಲ್ಯಾಬ್ ತಪ್ಪು ವರದಿ ವಿರುದ್ಧ ಕ್ರಮ

**ಕೊರೊನಾ ಪರೀಕ್ಷೆಗೆ ಸಂಬಂಧಿಸಿದಂತೆ ತಪ್ಪು ವರದಿಗಳು ಬರುತ್ತಿರುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಚಿವ ಬಿ. ಶ್ರೀರಾಮುಲು ತಿಳಿಸಿದ್ದಾರೆ.**

**ಕೊರೊನಾಗೆ ಸಂಬಂಧಿಸಿದಂತೆ ಕೆಲವು ಲೋಪಗಳಾಗಿವೆ. ರ್‍ಯಾಪಿಡ್ ಟೆಸ್ಟ್ ಸೇರಿದಂತೆ ತಪ್ಪು ವರದಿಗಳ ಕುರಿತು ಐ.ಸಿ.ಎಂ.ಆರ್. ಮಾರ್ಗಸೂಚಿ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ. ಬಳ್ಳಾರಿ ಸೇರಿದಂತೆ ಹಲವೆಡೆ ಕೊರೊನಾದಿಂದ ಮೃತರಾದವರ ಅಂತ್ಯಸಂಸ್ಕಾರದ ಕುರಿತು ದೂರುಗಳು ಬಂದಿವೆ. ಆ ಬಗ್ಗೆಯೂ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಶ್ರೀರಾಮುಲು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.**

# ಇಂದು ಭಾನುವಾರದ ಮೊದಲ ಲಾಕ್‌ಡೌನ್

**ಲಾಕ್‌ಡೌನನ್ನು ಕಟ್ಟುನಿಟ್ಟು ಜಾರಿಗೆ ಶನಿವಾರ ರಾತ್ರಿಯಿಂದಲೇ 144ನೇ ಸೆಕ್ಷನ್ ಅಡಿ ನಿಷೇಧಾಜ್ಞೆ ಜಾರಿ.**

**ಅನಗತ್ಯವಾಗಿ ಮನೆಯಿಂದ ಹೊರ ಬಂದರೆ ಶಿಸ್ತು ಕ್ರಮ**

**ಆಸ್ಪತ್ರೆ, ಔಷಧಿ, ದಿನಸಿ, ತರಕಾರಿ ಮಾರಾಟಕ್ಕೆ ಅವಕಾಶ**

**ಹೋಟೆಲ್‌ಗಳಲ್ಲಿ ಪಾರ್ಸೆಲ್‌ಗಳಿಗೆ ಮಾತ್ರ ಅವಕಾಶ**

ಬೆಂಗಳೂರು, ಜು. 4 - ಕೊರೊನಾ ಸೋಂಕು ನಿಯಂತ್ರಿಸಲು ರಾಜ್ಯ ಸರ್ಕಾರ ಮೊದಲ ಹಂತವಾಗಿ ಮುಂದಿನ ನಾಲ್ಕು ಭಾನುವಾರ ದಿನದಂದು ಸಂಪೂರ್ಣ ಲಾಕ್‌ಡೌನ್ ಮಾಡಲಿದೆ.

ಶನಿವಾರ ರಾತ್ರಿ 8 ಗಂಟೆಯಿಂದ ಸೋಮವಾರ ಬೆಳಿಗ್ಗೆ 5 ಗಂಟೆಯವರೆಗೂ ರಾಜ್ಯಾದ್ಯಂತ ಈ ನಿಯಮ ಜಾರಿಗೆ ಬರುತ್ತಿದೆ.

ಈ ಸಮಯದಲ್ಲಿ ರಾಜ್ಯದ ಗಡಿ ರಸ್ತೆಗಳನ್ನು ಮುಚ್ಚಲಿದ್ದು, ಓಡಾಟಕ್ಕೆ ಸಂಪೂರ್ಣ ನಿರ್ಬಂಧ ಹೇರಿದೆ. ಆದರೆ, ಸರಕು ಸಾಗಾಣಿಕೆ ಮತ್ತು ಅಗತ್ಯ ಸೇವೆಗಳಿಗೆ ಅವಕಾಶ ಮಾಡಿಕೊಡಲಾಗಿದೆ.

ಲಾಕ್‌ಡೌನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಇಂದು ರಾತ್ರಿಯಿಂದಲೇ 144ನೇ ಸೆಕ್ಷನ್ ಅಡಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ರಾಜ್ಯ ರಸ್ತೆ ಸಾರಿಗೆ ಖಾಸಗಿ ವಾಹನಗಳ ಓಡಾಟಕ್ಕೂ ಅವಕಾಶವಿಲ್ಲ.

ಅಗತ್ಯ ವಸ್ತುಗಳನ್ನು ಹೊರತುಪಡಿಸಿ, ಉಳಿದಂತೆ ಎಲ್ಲಾ ವಾಣಿಜ್ಯ ಚಟುವಟಿಕೆಗಳು ಸ್ತಬ್ಧಗೊಳ್ಳಲಿವೆ. ಅನಗತ್ಯವಾಗಿ ಮನೆಯಿಂದ ಹೊರ ಬಂದರೆ ಮುಲಾಜಿಲ್ಲದೆ ಪೊಲೀಸ್‌ನವರು ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಲಿದ್ದಾರೆ.

ಈಗ ಸದ್ಯಕ್ಕೆ ನಾಲ್ಕು ಭಾನುವಾರ ಮಾತ್ರ ಲಾಕ್‌ಡೌನ್ ಆಗಲಿದ್ದು, ಮುಂದಿನ ದಿನಗಳಲ್ಲಿ ಅಂದರೆ ಸೋಮವಾರದ ನಂತರ ಸರ್ಕಾರ ಕೆಲವು ಕಠಿಣ ನಿಯಮ ಜಾರಿಗೊಳಿಸಲಿದೆ.

ಲಾಕ್‌ಡೌನ್ ಸಂದರ್ಭದಲ್ಲಿ ಆಸ್ಪತ್ರೆ, ಔಷಧಿ ಅಂಗಡಿಗಳು ಎಂದಿನಂತೆ ತೆರೆದಿರುತ್ತವೆ. ಮಾಂಸ ಮಾರಾಟಕ್ಕೂ ಅವಕಾಶ ಕಲ್ಪಿಸಲಾಗಿದೆ.

ಹೋಟೆಲ್‌ಗಳಲ್ಲಿ ಪಾರ್ಸೆಲ್‌ಗಳಿಗೆ ಮಾತ್ರ ಅವಕಾಶ ಮಾಡಿಕೊಟ್ಟು, ಉಳಿದಂತೆ ದಿನಸಿ, ತರಕಾರಿ ಅಂಗಡಿಗಳನ್ನು ತೆರೆಯಬಹುದು.

ಲಾಕ್‌ಡೌನ್ ಅವಧಿಯಲ್ಲಿ ಮದ್ಯ ಮಾರಾಟ ಸಂಪೂರ್ಣ ನಿಷೇಧ. ಆಟೋ, ಟ್ಯಾಕ್ಸಿ ರಸ್ತೆಗಿಳಿಯುವುದಿಲ್ಲ. ವಾಣಿಜ್ಯ ಚಟುವಟಿಕೆಯಂತೂ ಸೋಮವಾರದ ಬೆಳಗಿನವರೆಗೂ ಸಂಪೂರ್ಣ ತೆರೆಯುವಂತಿಲ್ಲ. ಇನ್ನು ಕೈಗಾರಿಕೆಗಳಿಗೂ ಇದು ಅನ್ವಯವಾಗಲಿದೆ. ಈ ಮಧ್ಯೆ ಲಾಕ್‌ಡೌನ್ ಸಂದರ್ಭದಲ್ಲಿ ಯಾವುದೇ ರೀತಿ ಅಹಿತಕರ ಘಟನೆಗಳು ಜರುಗ ಬಾರದೆಂದು ಬಿಗಿ ಭದ್ರತೆ ವಹಿಸಲಾಗಿದೆ. ಮುಖ್ಯ ಕಾರ್ಯದರ್ಶಿಗಳು ಹಾಗೂ ಪೊಲೀಸ್ ಮಹಾನಿ ರ್ದೇಶಕರು ಜಿಲ್ಲಾಡಳಿತಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಅದರಂತೆ ಕಾರ್ಯನಿರ್ವಹಿಸಲು ತಿಳಿಸಲಾಗಿದೆ.

## ಲಾಕ್‌ಡೌನ್ ವೇಳೆ ಮದ್ಯ ನಿಷೇಧ: ಡಿಸಿ ಆದೇಶ




**ದಾವಣಗೆರೆ, ಜು.4- ಕೋವಿಡ್ 19 ಸೋಂಕು ಹರಡುವಿಕೆ ನಿಯಂತ್ರಿಸುವ ಸಲುವಾಗಿ ಕರ್ಫ್ಯೂ ಅವಧಿ ಪ್ರಾರಂಭವಾಗುವ ರಾತ್ರಿ 8 ಗಂಟೆಗೆ ಎಲ್ಲಾ ಅಬಕಾರಿ ಸನ್ನದುಗಳನ್ನು ಮುಚ್ಚಲು ಹಾಗೂ ಪೂರ್ಣ ದಿನ ಲಾಕ್‌ಡೌನ್ ಇರುವ ಭಾನುವಾರಗಳು ಅಂದರೆ ಜುಲೈ 5, 12, 19, 26 ಹಾಗೂ ಆಗಸ್ಟ್ 2 ರಂದು ಜಿಲ್ಲೆಯಾದ್ಯಂತ ಎಲ್ಲಾ ತರಹದ ಮದ್ಯದ ಸರಬರಾಜು ಹಾಗೂ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಆದೇಶಿಸಿದ್ದಾರೆ.**

## ಜಿಲ್ಲೆಯ 7 ಜನರಿಗೆ ಕೊರೊನಾ

ದಾವಣಗೆರೆ, ಜು. 4 – ಜಿಲ್ಲೆಯಲ್ಲಿ ಶನಿವಾರ ಏಳು ಕೊರೊನಾ ಪ್ರಕರಣಗಳು ಪತ್ತೆಯಾಗಿದ್ದು, ಇದೇ ದಿನ ಒಂಭತ್ತು ಜನರು ಬಿಡುಗಡೆಯಾಗಿದ್ದಾರೆ.

ಇದರಿಂದಾಗಿ ಜಿಲ್ಲೆಯಲ್ಲಿ ಸಕ್ರಿಯ ಕೊರೊನಾ ಪ್ರಕರಣಗಳ ಸಂಖ್ಯೆ 42ಕ್ಕೆ ಇಳಿಕೆಯಾಗಿದೆ. ಶನಿವಾರ ಗುಣಮುಖರಾಗಿ ಬಿಡುಗಡೆಯಾದವರಲ್ಲಿ ಹೊನ್ನಾಳಿ ತಾಲ್ಲೂಕಿನ ಹತ್ತೂರು ಗ್ರಾಮದ ಒಂದು ವರ್ಷದ ಮಗು ಸಹ ಸೇರಿದೆ ಎಂದು ಜಿಲ್ಲಾಡಳಿತದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಬೆಳಗಾವಿ ಹಾಗೂ ದೆಹಲಿಯಿಂದ ನಗರಕ್ಕೆ ಮರಳಿದ ಇಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. ನಗರದ ಶಿವಕುಮಾರ ಸ್ವಾಮಿ ಬಡಾವಣೆ ಹಾಗೂ ಅಹಮದ್ ನಗರಗಳ ತಲಾ ಒಬ್ಬರು ಮತ್ತು ಎಂಸಿಸಿ ಎ ಬ್ಲಾಕ್‌ನ ದಂಪತಿಗಳಲ್ಲಿ ಸೋಂಕು ಕಾಣಿಸಿಕೊಂಡಿದೆ.

ಹೊನ್ನಾಳಿಯ ಕ್ಯಾಸಿನಕೆರೆ, ಹರಿಹರದ ಇಂದಿರಾ ನಗರ ಹಾಗೂ ಚನ್ನಗಿರಿಯ ಮಠದ ರಸ್ತೆಯಲ್ಲಿ ತಲಾ ಒಬ್ಬರಲ್ಲಿ ಸೋಂಕು ಪತ್ತೆಯಾಗಿದೆ. ಶನಿವಾರದಂದು ವಿನೋಬ ನಗರದ ಒಂದೇ ಮನೆಯ ನಾಲ್ವರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಉಳಿದಂತೆ ನಗರದ ಬೇತೂರು ರಸ್ತೆ, ಬೀಡಿ ಲೇಔಟ್‌ನ ಒಬ್ಬರು (11ನೇ ಪುಟಕ್ಕೆ)

## ಕುಂದುವಾಡ ಕೆರೆಯಲ್ಲಿ ಮೀನುಗಳ ಸಾವು : ಸೂಕ್ತ ಕ್ರಮಕ್ಕೆ ಆಗ್ರಹ



ದಾವಣಗೆರೆ, ಜು. 5- ಕುಂದುವಾಡ ಕೆರೆಯಲ್ಲಿ ಮೀನುಗಳು ಯಥೇಚ್ಛವಾಗಿ ಸಾವನ್ನಪ್ಪಿದ್ದು, ಕಳೆದ ನಾಲ್ಕೈದು ದಿನಗಳಿಂದ ವಾಯುವಿಹಾರಿಗಳಿಗೆ ತಲೆನೋವಾಗಿ ಪರಿಣಮಿಸಿದೆ.

ಕುಂದುವಾಡ ಕೆರೆ ಪ್ರವೇಶಿಸುತ್ತಲೇ ಸತ್ತ ಮೀನುಗಳ ವಾಸನೆ ವಾಯುವಿಹಾರಿ ಗಳನ್ನು ಸ್ವಾಗತಿಸುತ್ತದೆ. ಅದೂ ಹೊರ ಹೋಗುವವರೆಗೂ. ಈ ಮಧ್ಯೆ ಕೆರೆ ಸುತ್ತಲೂ ಮೂಗು ಮುಚ್ಚಿ ಕೊಂಡೇ ನಡೆದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, (6ನೇ ಪುಟಕ್ಕೆ)



**ದಾವಣಗೆರೆ, ಜು.4- ಶನಿವಾರ ಬೀರೂರು- ಸಮ್ಮಸಗಿ ರಸ್ತೆಯ ಬದಿಯಲ್ಲಿ ಸ್ಮಾರ್ಟ್ ಸಿಟಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸಸಿ ನೆಡುವ ಕಾರ್ಯಕ್ರಮಕ್ಕೆ ನಗರಾಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಹಾಗೂ ಆರೋಗ್ಯ ಸಚಿವ ಬಿ.ಶ್ರೀರಾಮುಲು ಚಾಲನೆ ನೀಡಿದ್ದಾರೆ.**

## ನಾಳೆ ಶಿಷ್ಯ ವೇತನ ಇತ್ಯರ್ಥ

**ವೈದ್ಯ ವಿದ್ಯಾರ್ಥಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರ ಭರವಸೆ**

ದಾವಣಗೆರೆ, ಜು.4- ಕಾಲೇಜಿನ ಆಡಳಿತ ಮಂಡಳಿಯೇ ಶಿಷ್ಯ ವೇತನ ನೀಡಬೇಕೆಂದು ಸಿಎಂ ಸೂಚಿಸಿದ್ದಾರೆ. ಸೋಮವಾರದಂದು ಶಿಷ್ಯ ವೇತನದ ಸಮಸ್ಯೆ ಬಗೆಹರಿಸುವುದಾಗಿ ಹೋರಾಟಕ್ಕಿಳಿದಿರುವ ವೈದ್ಯ ವಿದ್ಯಾರ್ಥಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಭರವಸೆ ನೀಡಿದರು.

ನಗರದ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಶಿಷ್ಯ ವೇತನಕ್ಕಾಗಿ ಜೆಜೆಎಂ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಮತ್ತು ಗೃಹ ವೈದ್ಯ ವಿದ್ಯಾರ್ಥಿಗಳ ಅನಿರ್ದಿಷ್ಟಾವಧಿ ಮುಷ್ಕರದ 6ನೇ (11ನೇ ಪುಟಕ್ಕೆ)

# ಲಸಿಕೆಗೆ ಅವಸರ ಮಾಡಿದರೆ ಅಪಾಯ: ಎಚ್ಚರಿಕೆ

**ಚಿಕಿತ್ಸೆ ಕಳಪೆಯಾಗುವ ಬಗ್ಗೆ ವಿಜ್ಞಾನಿಗಳ ಎಚ್ಚರಿಕೆ**

ನವದೆಹಲಿ, ಜು. 4 – ಭಾರತದಲ್ಲಿ ಕೊರೊನಾ ವೈರಸ್ ವಿರುದ್ಧದ ಲಸಿಕೆ ರೂಪಿಸುವ ಪ್ರಕ್ರಿಯೆ ಚುರುಕು ಪಡೆದುಕೊಂಡಿದೆ. ಆದರೆ, ಲಸಿಕೆ ರೂಪಿಸುವ ಪ್ರಕ್ರಿಯೆಗೆ ತಿಂಗಳುಗಳು ಹಾಗೂ ಕೆಲವೊಮ್ಮೆ ವರ್ಷಗಳೇ ಬೇಕಾಗಬಹುದು ಎಂದು ಹಲವಾರು ವಿಜ್ಞಾನಿಗಳು ತಿಳಿಸಿದ್ದಾರೆ.

ಮುಂದಿನ ತಿಂಗಳೇ ಕೊರೊನಾ ಲಸಿಕೆ ರೂಪಿಸಲು ಬಯಸುವುದಾಗಿ ಐ.ಸಿ.ಎಂ.ಆರ್. ನಿನ್ನೆ ಹೇಳಿತ್ತು.

ಈ ಬಗ್ಗೆ ಆಶಾ ಭಾವನೆ ಇದೆ. ಆದರೆ, ಎಚ್ಚರಿಕೆಯನ್ನೂ ವಹಿಸಬೇಕಿದೆ. ಶುಕ್ರವಾರವಷ್ಟೇ ಅಹಮದಾಬಾದ್‌ನ ಜೈಡಸ್ ಕ್ಯಾಡಿಲಾ ಸಹ ಲಸಿಕೆಯ ಮಾನವ ಪ್ರಯೋಗಕ್ಕೆ ಅನುಮತಿ ದೊರೆತಿರುವುದಾಗಿ ಪ್ರಕಟಿಸಿತ್ತು.

ಲಸಿಕೆಯನ್ನು ಸರಿಯಾದ ಪ್ರಕ್ರಿಯೆಯಲ್ಲಿ ರೂಪಿಸಬೇಕಾದರೆ, ಅದರ ದಕ್ಷತೆ,ಸುರಕ್ಷತೆ ಹಾಗೂ ರೋಗ ನಿರೋಧಕ ಶಕ್ತಿಯನ್ನು ಪರೀಕ್ಷಿಸಲು ನಾಲ್ಕು ವಾರಗಳು ಸಾಲದು ಎಂದು ವೆಲ್‌ಕಮ್ ಟ್ರಸ್ಟ್/ಡಿಬಿಟಿ ಇಂಡಿಯಾ ಅಲೈಯನ್ಸ್ ಸಿಇಒ ಹಾಗೂ ವೈರಾಲಜಿಸ್ಟ್ ಶಹೀದ್ ಜಮೀಲ್ ಹೇಳಿದ್ದಾರೆ.

ವೇಗವಾಗಿ ಕೊರೊನಾ ವೈರಸ್ ವಿರುದ್ಧ ಲಸಿಕೆ ರೂಪಿಸುವುದು ಪ್ರಶಂಸಾರ್ಹ ಕ್ರಮ. ಆದರೆ, ನಾವು ಅತಿಯಾದ ವೇಗದಲ್ಲಿ ಸಾಗುತ್ತಿದ್ದೇವೆಯೇ? ಎಂಬ ಪ್ರಶ್ನೆಯನ್ನೂ ಕೇಳಬೇಕಾಗುತ್ತದೆ ಎಂದು ವೈರಾಲಜಿಸ್ಟ್ ಉಪಾಸನಾ ರಾಯ್ ಹೇಳಿದ್ದಾರೆ.

ಐಸಿಎಂಆರ್ ಲಸಿಕೆ ಕುರಿತು ಬರೆದ ಪತ್ರದ ಧಾಟಿ ಹಾಗೂ ಅವಸರದ ವೇಳಾಪಟ್ಟಿಯ ಬಗ್ಗೆ ಹಲವಾರು ವಿಜ್ಞಾನಿಗಳು ಕಳವಳ ವ್ಯಕ್ತಪಡಿಸಿದ್ದಾರೆ. ಲಸಿಕೆ ರೂಪಿಸುವ ಪ್ರಕ್ರಿಯೆಗೆ ಭಂಗ ತರಬಾರದು ಎಂದೂ ಎಚ್ಚರಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಇಮ್ಯುನಾಲಜಿಸ್ಟ್ ಸತ್ಯಜಿತ್ ರಥ್, ಲಸಿಕೆ ರೂಪಿಸುವುದು ಬಹು ಹಂತದ ಪ್ರಕ್ರಿಯೆಯಾಗಿದೆ. ಮೊದಲ ಹಂತದಲ್ಲಿ ಸಣ್ಣ ಮಟ್ಟದಲ್ಲಿ ಪ್ರಯೋಗ ನಡೆಸಲಾಗುತ್ತದೆ. ಇದರಲ್ಲಿ ಕೆಲವೇ ಜನರು ಭಾಗಿಯಾಗಿರುತ್ತಾರೆ. ಎರಡನೇ ಹಂತದಲ್ಲಿ ಕೆಲವು ನೂರು ಜನರ ಮೇಲೆ ಪ್ರಯೋಗ ನಡೆಸಿ ಅದರ ಪರಿಣಾಮ ಪರಿಶೀಲಿಸ ಲಾಗುತ್ತದೆ. ನಂತರದಲ್ಲಿ ಸಾವಿರಾರು ಜನರ ಮೇಲೆ ಪ್ರಯೋಗ ಮಾಡಲಾಗುತ್ತದೆ. ಇದಕ್ಕೆ ಹಲವು ತಿಂಗಳೇ ಬೇಕಾಗುತ್ತವೆ ಎಂದವರು ಹೇಳಿದ್ದಾರೆ.

ವೈದ್ಯಕೀಯ ಪರೀಕ್ಷೆಯ ಹಂತ ಪೂರ್ಣಗೊಳ್ಳಲು ಕನಿಷ್ಠ 12 ರಿಂದ 18 ತಿಂಗಳು ಬೇಕಾಗುತ್ತದೆ. ಆಗಸ್ಟ್ 15ರವರೆಗೆ ಕಂಪನಿಗಳಿಗೆ ಕೇವಲ ಒಂದು ತಿಂಗಳು ಸಮಯ ಸಿಗುತ್ತದೆ ಎಂದವರು ಹೇಳಿದ್ದಾರೆ. ಲಸಿಕೆ ರೂಪಿಸುವಲ್ಲಿ ಹಲವು ಹಂತಗಳಿರುತ್ತವೆ. ಇವುಗಳನ್ನು ಮೀರುವುದು ಇಲ್ಲವೇ ಅವಸರ ಪಡಿಸುವುದು ಮಾಡುವುದು ಅಪಾಯಕಾರಿ. ಇಲ್ಲವೇ ಇದರಿಂದ ಕಳಪೆ ಲಸಿಕೆಯೂ ರೂಪುಗೊಳ್ಳಬಹುದಾಗಿದೆ ಎಂದು ರೇ ತಿಳಿಸಿದ್ದಾರೆ.

# ಕೊರೊನಾ ವಾರಿಯರ್ಸ್‌ಗೆ ಗೌರವಿಸುವುದರಿಂದ ಉತ್ಸಾಹ ಹೆಚ್ಚುತ್ತದೆ



ದಾವಣಗೆರೆ, ಜು. 4- ಕೊರೊನಾ ವಾರಿಯರ್ಸ್‌ಗೆ ಸನ್ಮಾನಿಸಿ, ಗೌರವಿಸುವುದರಿಂದ ಅವರಲ್ಲಿ ಮತ್ತಷ್ಟು ಉತ್ಸಾಹ ಹೆಚ್ಚಾಗಲು ಸಹಕಾರಿಯಾಗುತ್ತದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಪ್ರತಿಪಾದಿಸಿದರು.

ನಗರದ ದೊಡ್ಡಪೇಟೆಯಲ್ಲಿನ ಶ್ರೀ ನಾಮದೇವ ಭಜನಾ ಮಂದಿರದಲ್ಲಿ ಶನಿವಾರ ನಾಮದೇವ ಸಿಂಪಿ ಸಮಾಜ ದೈವ ಮಂಡಳಿ ವತಿಯಿಂದ ಕೊರೊನಾ ವಾರಿಯರ್ಸ್‌ಗೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕೊರೊನಾ ನಿಯಂತ್ರಿಸಲು ವಾರಿಯರ್ಸ್ ಶ್ರಮ ಅಮೂಲ್ಯವಾದದ್ದು. ಪೌರ ಕಾರ್ಮಿಕರು, ಆಶಾ ಕಾರ್ಯಕರ್ತೆಯರು, ವೈದ್ಯಕೀಯ ಸಿಬ್ಬಂದಿ, ಪೊಲೀಸ್ ಇಲಾಖೆ, ಜಿಲ್ಲಾಡಳಿತ ಎಲ್ಲರೂ ಇಲ್ಲಿಯವರೆಗೂ ತಮ್ಮ ಪ್ರಾಣದ ಹಂಗು ತೊರೆದು ಕಾರ್ಯ ನಿರ್ವಹಿಸುತ್ತಿದ್ದು ಇವರೆಲ್ಲರ ಸೇವೆ ಶ್ಲಾಘನೀಯ ಎಂದರು.

ಜಿಲ್ಲೆಯಲ್ಲಿ ಆರಂಭದಲ್ಲಿಯೇ ನನ್ನ ಮಗಳಲ್ಲಿ ಸೋಂಕು ದೃಢಪಟ್ಟಿತ್ತು. ಆರಂಭದಲ್ಲಿ ಆತಂಕಕ್ಕೆ ಒಳಗಾಗಿದ್ದೆವು. ಆದರೆ ಜಿಲ್ಲಾಡಳಿತ, ವೈದ್ಯರು ಎಲ್ಲರೂ ನಮ್ಮ ಆತಂಕ ನಿವಾರಿಸಿ, ಮಗಳನ್ನು ಗುಣಮುಖರನ್ನಾಗಿಸಿದರು. ಇದೀಗ ಸೋಂಕಿತರ ಸಂಖ್ಯೆ ಮೂನ್ನೂರಕ್ಕೂ ಹೆಚ್ಚಾಗಿದೆ.

## ನಾಮದೇವ ಸಿಂಪಿ ಸಮಾಜ ದೈವ ಮಂಡಳಿ ವತಿಯಿಂದ ಕೊರೊನಾ ವಾರಿಯರ್ಸ್‌ಗೆ ಸನ್ಮಾನ ಕಾರ್ಯಕ್ರಮ ಸಂಸದ ಸಿದ್ದೇಶ್ವರ

ಸೋಂಕು ನಿಯಂತ್ರಣಕ್ಕೆ ಸಾಕಷ್ಟು ಕ್ರಮ ಕೈಗೊಂಡಿದ್ದರೂ ಸೋಂಕು ಹೆಚ್ಚಾಗುತ್ತಿದೆ. ಆದಷ್ಟು ಶೀಘ್ರದಲ್ಲಿಯೇ ಸೋಂಕು ಮುಕ್ತ ಜಿಲ್ಲೆಯನ್ನಾಗಿಸಲು ನಾವೆಲ್ಲರೂ ಕೈ ಜೋಡಿಸೋಣ ಎಂದರು.

ಕೊರೊನಾ ಮಹಾಮಾರಿಗೆ ಹೆದರುವ ಅಗತ್ಯವಿಲ್ಲ. ಸೋಂಕಿತ ವ್ಯಕ್ತಿಗೆ ಬೇರೆ ಯಾವುದಾದರೂ ಕಾಯಿಲೆಗಳಿದ್ದರೆ ಮಾತ್ರ ಅದು ಅಪಾಯಕಾರಿ. ಆಗಸ್ಟ್ ತಿಂಗಳ ವೇಳೆಗೆ ಕೊರೊನಾ ಸೋಂಕಿಗೆ ಲಸಿಕೆ ಸಿಗುವ ಭರವಸೆಯ ವರದಿಗಳು ಬಂದಿವೆ. ಬೇರೆ ದೇಶ ಹಾಗೂ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ದೇಶ, ನಮ್ಮ ರಾಜ್ಯ ಸೋಂಕು ನಿಯಂತ್ರಣದಲ್ಲಿ ಮುಂಚೂಣಿಯಲ್ಲಿದೆ. ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಯಡಿಯೂರಪ್ಪನವರು ಸಾಕಷ್ಟು ಉತ್ತಮ ಕ್ರಮಗಳ ಮೂಲಕ ಸೋಂಕು ನಿಯಂತ್ರಿಸುತ್ತಿದ್ದಾರೆ. ಸಂಕಷ್ಟದಲ್ಲಿನ ಜನತೆಗಾಗಿ ಹಲವಾರು ಯೋಜನೆಗಳನ್ನೂ ಜಾರಿಗೆ ತಂದಿದ್ದಾರೆ ಎಂದರು.

ಸಮಾಜದ ಹಿರಿಯ ಮುಖಂಡ ಕೆ.ಬಿ. ಶಂಕರನಾರಾಯಣ್ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಹಿಂದೆ 'ವೈದ್ಯೋನಾರಾಯಣೋ ಹರಿ' ಎನ್ನುತ್ತಿದ್ದೆವು. ಈಗ 'ಕೊರೊನಾ ವಾರಿಯರ್ಸ್ ನಾರಾಯಣೋ ಹರಿ' ಎನ್ನಬೇಕಿದೆ ಎಂದರು.

ಸಿ.ಜಿ. ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸಿದ ವೈದ್ಯರು, ಶುಶ್ರೂಷಕರು, ಪೊಲೀಸರು, ಆಶಾ ಕಾರ್ಯಕರ್ತೆಯರು, ಪೌರ ಕಾರ್ಮಿಕರು ಹಾಗೂ ಪರ್ತಕರ್ತರನ್ನು ಸನ್ಮಾನಿಸಿ, ಗೌರವಿಸಲಾಯಿತು. ನಾಮದೇವ ಸಿಂಪಿ ಸಮಾಜ ದೈವ ಮಂಡಳಿಯ ಅಧ್ಯಕ್ಷ (6ನೇ ಪುಟಕ್ಕೆ)

**ಸೈಟು, ಮನೆಗಳು ಮಾರಾಟಕ್ಕೆ**
ಎಂ.ಸಿ.ಸಿ. 'ಬಿ' ಬ್ಲಾಕ್ ನಲ್ಲಿ
44x60 ಸೈಟು, 22x60 ಮನೆ,
28x60 ಮನೆ, 44x60 ಮನೆ,
40x70 ಸೈಟು, 22x60 ಮನೆ,
44x60 ಹಳೇ ಮನೆ, 35x65 ಮನೆ, 80x60.
ಕಿರಣ್ ಬೂಸ್ನೂರ್ (ಏಜೆಂಟ್)
97315-63409, 98440-63409

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross,
P.J. Extension, Davangere.
08192-237325, 94837 23166

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಖಂಡಿತಾ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಬಾಡಿಗೆಗೆ**
ಸಸ್ಯಹಾರಿ ಮೆಸ್, ಸಸ್ಯಹಾರಿಗಳ ವಾಸಕ್ಕೆ, ಪೇಯಿಂಗ್ ಗೆಸ್ಟ್, ಟ್ಯೂಷನ್ ಸೆಂಟರ್, ಸ್ಟೋರ್ ಹೌಸ್, ಪ್ಲೇ ಗ್ರೂಪ್/ನರ್ಸರಿ ಶಾಲೆ, ಗ್ರಂಥಾಲಯ ಹಾಗೂ ಇನ್ನಿತರೆ ಉದ್ದೇಶಗಳಿಗೆ ಸ್ವತಂತ್ರವಾದ 3BHK ಮನೆ ಮೆಡಿಕಲ್ ಹಾಸ್ಟೆಲ್ ಪಕ್ಕದಲ್ಲಿ ಖಾಲಿ ಇದೆ. ಸಂಪರ್ಕಿಸಿ.
94936 08294

**ಮನೆ ಬಾಡಿಗೆಗೆ ಇದೆ**
ಸುಸಜ್ಜಿತ, ವಾಸ್ತು ಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, 2 ಬೆಡ್ ರೂಂ, ಪೂಜಾ ರೂಂ ಇರುವ ಏಳೂವರೆ ಚದುರವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ. ಸಂಪರ್ಕಿಸಿ:
ಮೊ: 99004 66607

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ.
ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ 3 ತಿಂಗಳ ಮಗುವನ್ನು ಮನೆಯಲ್ಲಿಯೇ ಇದ್ದು ಕುಟುಂಬದವರಂತೆ ಪ್ರೀತಿಯಿಂದ ನೋಡಿಕೊಳ್ಳಲು ಆಯಾ ಬೇಕಾಗಿದ್ದಾರೆ ಹಾಗೂ ಅಡುಗೆ ಮಾಡಲು ಬೇಕಾಗಿದ್ದಾರೆ, ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ
98809 33332

**ಮಳಿಗೆ/ಮನೆ ಬಾಡಿಗೆಗೆ ಇದೆ**
#337/16A-14 ಗಣೇಶ ಲೇ ಔಟ್ ಫೈರ್ ಸ್ಟೇಷನ್ ಎದುರಿನಲ್ಲಿ ಕಂಪ್ಯೂಟರ್ ಸೆಂಟರ್/ಫೈನಾನ್ಸ್ ಕಂ/ ಕೋರಿಯರ್ ಅಂಗಡಿಗೆ ಹಾಗೂ ಇತರೆ ಅಂಗಡಿಗಳಿಗೆ ಗೋಡಾನ್ ಮಾಡಿಕೊಳ್ಳಲು ಬೇಕಾಗಿರುವಂತಹ ಮ್ಯಾನೇಜರ್ ಕ್ಯಾಬಿನ್ ರೆಡಿ ಇರುವ ದೊಡ್ಡದಾದ ಮಳಿಗೆ ಬಾಡಿಗೆಗೆ ಇದೆ.
70194 31591, 87227 42210, 94483 95452

**ಮನೆ ಮತ್ತು ಸೈಟುಗಳು ಮಾರಾಟಕ್ಕಿವೆ**
ಹೊಸ ಲೇಔಟ್‌ನಲ್ಲಿ ಸೈಟುಗಳು 30x40, 20x30 ಮನೆ 40x60 ಸೈಟ್ ಮಾರಾಟಕ್ಕಿವೆ. ಮತ್ತು ಜಮೀನು ಮಾರಾಟಕ್ಕಿವೆ.
ಸಪ್ತಗಿರಿ ಎಂಟರ್‌ಪ್ರೈಸಸ್
87224 07999

**2 BHK ಮನೆ ಮತ್ತು ರೂಂ ಬಾಡಿಗೆಗೆ**
ಪೂರ್ವ ದಿಕ್ಕಿನ ಸುಸಜ್ಜಿತ ಮನೆ ಹಾಗೂ ರೂಂ ತಿಮ್ಮಾರೆಡ್ಡಿ, ಮಹೇಶ್ ಪಿ.ಯು. ಕಾಲೇಜ್ ಹಾಗೂ ಬಿ.ಐ.ಇ.ಟಿ. ಕಾಲೇಜಿಗೂ ಹತ್ತಿರ ಇರುವಂತೆ ಆಂಜನೇಯ ಬಡಾವಣೆ 18ನೇ ಕ್ರಾಸ್, ದಾವಣಗೆರೆ ಇಲ್ಲಿ ಬಾಡಿಗೆಗೆ ಇದೆ.
98452 16749, 95352 82899

**ಬೇಕಾಗಿದ್ದಾರೆ**
ಹರಿಹರದ ಹರ್ಲಾಪುರದ ಭಾರತ್ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ
95383 32828

**ಮನೆ ಲೀಜ್‌ಗೆ ಇದೆ**
ದಾವಣಗೆರೆ ಸರಸ್ವತಿ ನಗರ, ಎಸ್.ಎಸ್ ಆಸ್ಪತ್ರೆ ರಸ್ತೆ, ಹೊಸ ಚರ್ಚ್ ಹತ್ತಿರ ಮೊದಲನೇ ಮಹಡಿಯಲ್ಲಿ 15x40 ಅಳತೆಯ (#807/6) ಪೂರ್ವ ದಿಕ್ಕಿನ ಸಿಂಗಲ್ ಬೆಡ್ ರೂಂ ಮನೆ ಲೀಜ್‌ಗೆ ಇದೆ.
ಸಂಪರ್ಕಿಸಿ:
99641 10489, 96200 56056

**ಬಾಡಿಗೆ / ಭೋಗ್ಯಕ್ಕೆ**
ದಾವಣಗೆರೆ ಪಿ.ಬಿ. ರಸ್ತೆಯ 4 ಸರ್ಕಿಟ್ ಹೌಸ್ ಹತ್ತಿರ ಪ್ರವಾಸಿ, ಲಾಜಿಸ್ಟಿಕ್ ಟ್ರಾನ್ಸ್‌ಪೋರ್ಟ್, ಕೋರಿಯರ್ ಬುಕ್ಕಿಂಗ್ ಆಫೀಸ್‌ಗೆ ಯೋಗ್ಯವಾದ ಸೋಲಾರ್ ಮತ್ತು ಪಾರ್ಕಿಂಗ್ ಕಾಂಪೌಂಡ್, ಸೌಲಭ್ಯದ ಹೊಸಮನೆ ದೊರೆಯುತ್ತದೆ.
94800 00417, 94801 11416

**ಮಾರಾಟಕ್ಕೆ**
ನಿಟುವಳ್ಳಿ ಹೊಸ ಬಡಾವಣೆಯ ಮನೆಗಳು, 15×42(ಉತ್ತರ) 30×42( ದಕ್ಷಿಣ) 15×42( ದಕ್ಷಿಣ), ಮೇಡಂ ಲೇಔಟ್ ಮನೆ 30×40, ಜೆಎಚ್ ಪಟೇಲ್ ಶಿವಪಾರ್ವತಿ ಲೇಔಟ್ ಸೈಟ್ 30×40, KHB ಸೈಟ್ 30×40, ಸಂಪರ್ಕಿಸಿ:
7899636597, 9916525828

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾಸೆಟ್, Duroflex Bed, ಕಿಟಕಿಗೆ Aluminium door ಸೊಳ್ಳೆ ಮೆಶ್ ಹಾಕಲಾಗುವುದು.
ಸ್ವಪ್ನ ಕುಷನ್ ವರ್ಕ್ಸ್
ವಿಠಲ ದೇವಸ್ಥಾನದ ಹಿಂಭಾಗ, ಮಹಾರಾಜ ಪೇಟೆ, ದಾವಣಗೆರೆ
98445 81966

**ಮಳಿಗೆ ಬಾಡಿಗೆಗೆ ಇದೆ**
ಹದಡಿ ರಸ್ತೆ ಮೋರ್ ಹಿಂಭಾಗದ ಅಪೊಲೊ ಮೆಡಿಕಲ್ಸ್ ಪಕ್ಕದಲ್ಲಿ 15x25 ಅಳತೆಯ ಮಳಿಗೆ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮೊ.98444-38007

**ಮನೆ ಬಾಡಿಗೆಗೆ/ಲೀಸ್‌ಗೆ**
24 ತಾಸು ನೀರಿನ ಸೌಲಭ್ಯವುಳ್ಳ, ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ/ಲೀಸ್‌ಗೆ ಇದೆ. ದುರ್ಗಾಂಬಿಕ ಬಡಾವಣೆ, ನಿಟ್ಟುವಳ್ಳಿ ದಾವಣಗೆರೆ.
90084 71413

**ಮನೆಗಳು ಬಾಡಿಗೆಗಿವೆ**
ಎರಡನೇ ಮಹಡಿಯಲ್ಲಿ ಸಿಂಗಲ್ BHK ಯ ಉತ್ತರ ದಿಕ್ಕಿನ ಎರಡು ಮನೆಗಳು ಬಾಡಿಗೆಗಿವೆ. ಬೋರ್- ಕಾರ್ಪೋರೇಷನ್ ನೀರಿನ ಸೌಲಭ್ಯವಿರುವ ಮನೆಗಳು, ನಂ. 651, ಶ್ರೀ ಕಟೀಲು, 6ನೇ ಕ್ರಾಸ್, ಶ್ರೀನಿವಾಸ ನಗರ, ಹದಡಿ ರಸ್ತೆ, ದಾವಣಗೆರೆ
ಮೊ.: 70194 27951, 93410 14488

**ಬೇಕಾಗಿದ್ದಾರೆ**
ಕಂಪ್ಯೂಟರ್ ಆಪರೇಟರ್
ವಿದ್ಯಾರ್ಹತೆ: ಪಿ.ಯು.ಸಿ/ಪದವಿ ಕಡ್ಡಾಯವಾಗಿ ಬಿಲ್ಲಿಂಗ್, ಇಂಟರ್ನೆಟ್, ಇ-ಮೇಲ್, ಜ್ಞಾನ ಉಳ್ಳವರಾಗಿರಬೇಕು.
ಸಂಪರ್ಕಿಸಿ: ಮಹೇಶ್ ಟ್ರೇಡಿಂಗ್ ಕಂಪನಿ, ಈರುಳ್ಳಿ ಮಾರುಕಟ್ಟೆ ಸಂಕೀರ್ಣ, ಪಿ.ಬಿ ರೋಡ್ ದಾವಣಗೆರೆ.
98449 35544

**ಮಾರಾಟಕ್ಕೆ**
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 40x60 2 ಫ್ಲೋರ್ ಮನೆ (ಉತ್ತರ) 20x30 3 ಫ್ಲೋರ್ ಮನೆ (ಪಶ್ಚಿಮ). ಸರಸ್ವತಿ ನಗರದಲ್ಲಿ 20x40 (ಪೂರ್ವ) ಮನೆ, ಚಿಕ್ಕಮ್ಮಣ್ಣಿ ಲೇಔಟ್‌ನಲ್ಲಿ 30x40 3 ಫ್ಲೋರ್ ಮನೆ ಹಾಗೂ ಇಂಡಸ್ಟ್ರಿಯಲ್ ಏರಿಯಾ, ಸರ್ ಎಂ.ವಿ ಕಾಲೇಜು ಹತ್ತಿರ 30x50 (ದಕ್ಷಿಣ) ಸೈಟು ಮಾರಾಟಕ್ಕಿದೆ.
98804 40602

**Industrial Shed For Rent**
Industrial Shed Measurement 60'x70' suitable for Industry/Godown with 15HP for Rent at Lokikere Road.
98441 72155
97405 93663

**ಖರೀದಿಗೆ ಮನೆ ಬೇಕಾಗಿದೆ**
1) 30x40 ಅಥವಾ 30x50 ರಲ್ಲಿ 3 ಬೆಡ್‌ರೂಂ ಮನೆ ಕೆಳಗಡೆ 2 ಬೆಡ್ ರೂಂ ಮೇಲ್ಗಡೆ ಬೋರ್ ನೀರಿನ ಸೌಲಭ್ಯವಿರುವ ಮನೆ
2)20x30 ರಲ್ಲಿ ಕೆಳಗಡೆ 2ಬೆಡ್ ರೂಂ ಮೇಲ್ಗಡೆ 1ಬೆಡ್ ರೂಂ ಮನೆ
3) 30x40 / 30x50 ರಲ್ಲಿ ಒಂದೇ ಮಹಡಿ ಇರುವ 2 ಬೆಡ್ ರೂಂ ಮನೆ MCC 'B' ಬ್ಲಾಕ್‌ನಲ್ಲಿ ಬೇಕಾಗಿದೆ.
63663 27369


# ಮರಣ ಸಂಖ್ಯೆ ಇಳಿಕೆಗೆ ಕ್ರಮ

**(5ನೇ ಪುಟದಿಂದ)** ಉಸ್ತುವಾರಿ ಸಚಿವರು, ಶಾಸಕರೆಲ್ಲ ಸೇರಿ ಉದ್ಘಾಟನೆಯನ್ನೂ ಸಹ ನೆರವೇರಿಸುತ್ತೇವೆ ಎಂದು ಶ್ರೀರಾಮುಲು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ತಾಯಿ ಮತ್ತು ಮಕ್ಕಳ ಮರಣ ಪ್ರಮಾಣ ಇಳಿಮುಖವಾಗಿರುವುದಕ್ಕೆ ಕೇಂದ್ರ ಸರ್ಕಾರ ಪ್ರಶಂಸೆ ವ್ಯಕ್ತಪಡಿಸಿದೆ ಎಂದೂ ಅವರು ಇದೇ ಸಂದರ್ಭದಲ್ಲಿ ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಮಾತನಾಡಿ, ಇಂದು ಜಿಲ್ಲಾಸ್ಪತ್ರೆ ಆವರಣದಲ್ಲಿ ಸಚಿವರು, ಸಂಸದರು, ಶಾಸಕರು ಸೇರಿದಂತೆ ಎಲ್ಲರ ಸಹಯೋಗದೊಂದಿಗೆ ತಾಯಿ ಮತ್ತು ಮಕ್ಕಳ ನೂತನ ಆಸ್ಪತ್ರೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ.15 ತಿಂಗಳಲ್ಲಿ ಈ ಕಾಮಗಾರಿಗಳನ್ನು ಮುಗಿಸುವಂತೆ ಸೂಚನೆ ನೀಡಲಾಗಿದೆ ಎಂದರು.

ದಾವಣಗೆರೆ ನಗರವನ್ನು ಹಸಿರು ನಗರವನ್ನಾಗಿ ಮಾಡಲು ಸುಮಾರು 6500 ಸಸಿ ನೆಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಸ್ಮಾರ್ಟ್‌ಸಿಟಿ ಯೋಜನೆಯಡಿ ಸುಮಾರು ರೂ.15 ಕೋಟಿ ಅನುದಾನದಲ್ಲಿ ವಿವಿಧ ಕಾಮಗಾರಿಗಳಿಗೆ ಪೂಜೆ ನೆರವೇರಿಸಲಾಗುತ್ತಿದೆ. ಮುಖ್ಯಮಂತ್ರಿಗಳ ಮಾರ್ಗದರ್ಶನದಲ್ಲಿ ಜಿಲ್ಲೆಗೆ ಅನೇಕ ಅಭಿವೃದ್ಧಿ ಕಾಮಗಾರಿಗಳನ್ನು ಸಮರ್ಪಣೆ ಮಾಡುತ್ತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ರವೀಂದ್ರನಾಥ್, ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ.ರಾಮಚಂದ್ರ, ಪ್ರೊ.ಲಿಂಗಣ್ಣ, ಪಾಲಿಕೆ ಮೇಯರ್ ಅಜಯ್ ಕುಮಾರ್, ಜಿಲ್ಲಾ ಪಂಚಾಯತ್ ಅಧ್ಯಕ್ಷೆ ದೀಪಾ ಜಗದೀಶ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಎಸ್‌ಪಿ ಹನುಮಂತರಾಯ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಮಹಾನಗರಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಜಿಲ್ಲಾಸ್ಪತ್ರೆ ಡಿಎಸ್ ಡಾ.ನಾಗರಾಜ್, ಡಿಹೆಚ್‌ಓ ಡಾ. ರಾಘವೇಂದ್ರಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

# ಮೀನುಗಳ ಸಾವು : ಕ್ರಮಕ್ಕೆ ಆಗ್ರಹ

**(5ನೇ ಪುಟದಿಂದ)** ಇದುವರೆಗೂ ಯಾವುದೇ ಇಲಾಖೆ ಅಥವಾ ಅಧಿಕಾರಿ ಗಳು ತಿರುಗಿಯೂ ನೋಡಿಲ್ಲ ಎಂದು ವಾಯುವಿಹಾರಿಗಳು ಆರೋಪಿಸಿದ್ದಾರೆ.

'ಜನತಾವಾಣಿ'ಯೊಂದಿಗೆ ಮಾತನಾ ಡಿದ ವಿನಾಯಕ್, ನಿತ್ಯ ಬೆಳಿಗ್ಗೆ ಶುದ್ಧ ಗಾಳಿ ಕುಡಿಯುತ್ತಾ, ವಾಯು ವಿಹಾರ ಮಾಡಬೇಕೆಂದು ಇಲ್ಲಿಗೆ ಬರುತ್ತೇವೆ. ಆದರೆ ನಾಲ್ಕೈದು ದಿನಗಳಿಂದ ಮೀನಿನ ವಾಸನೆಯನ್ನೇ ಸೇವಿಸಬೇಕಾಗಿದೆ. ಕೆರೆಯಲ್ಲಿ ಸತ್ತ ಮೀನುಗಳನ್ನು ನಾಯಿಗಳು ರಸ್ತೆಗೆ ತಂದು ಬಿಡುತ್ತಿವೆ. ಇದರಿಂದ ವಾಸನೆ ಮತ್ತಷ್ಟು ಮೂಗಿಗೆ ರಾಚುತ್ತದೆ ಎಂದು ಹೇಳಿದರು.

ರಾಜನಹಳ್ಳಿ ಜಾಕ್‌ವೆಲ್ ನಿಂದ ನಿತ್ಯ ಕೆರೆಗೆ ನೀರು ಹರಿಸಲಾಗುತ್ತದೆ. ಆದರೆ ನೀರಿನ ಪಂಪ್‌ಗಳು ದುರಸ್ತಿಗೆ ಬಂದಿರುವುದರಿಂದ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿ ಕೆರೆ ನೀರಿನ ಪ್ರಮಾಣ ಕಡಿಮೆಯಾಗಿದೆ. ಇದರಿಂದಾಗಿ ಮೀನುಗಳು ಸಾವನ್ನಪ್ಪುತ್ತಿವೆ ಎನ್ನಲಾಗಿದೆ.

ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಇತ್ತ ಗಮನ ಹರಿಸಿ ಸತ್ತ ಮೀನುಗಳನ್ನು ತೆರವುಗೊಳಿಸಲು ಕಾರ್ಯೋನ್ಮುಖರಾಗಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

# ಗೌರವದಿಂದ ಉತ್ಸಾಹ ಹೆಚ್ಚುತ್ತದೆ

**(5ನೇ ಪುಟದಿಂದ)** ಜಗನ್ನಾಥ್ ಎಸ್.ಗಂಜೀಗಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಎಸ್.ಎ. ರವೀಂದ್ರನಾಥ್, ಪಾಲಿಕೆ ಮೇಯರ್ ಬಿ.ಜಿ. ಅಜಯ್ ಕುಮಾರ್, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಎಸ್ಪಿ ಹನುಮಂತರಾಯ, ಜ್ಞಾನದೇವ ಬೊಂಗಾಳೆ ಇತರರು ಉಪಸ್ಥಿತರಿದ್ದರು.

ಮಾಜಿ ಮೇಯರ್ ಎಂ.ಎಸ್. ವಿಠಲ್ ನಿರೂಪಿಸಿದರು. ಹೆಚ್.ಎಂ. ಮಂಜುನಾಥ ರಾವ್ ಸ್ವಾಗತಿಸಿದರು. ಸಹನಾ ಪ್ರಾರ್ಥಿಸಿದರು. ವಿಠ್ಠಲ್ ರಾಕುಂಡೆ ವಂದಿಸಿದರು.

# ಗುರು ವಂದನೆ...



ನಿಮ್ಮ ನಾಳೆ ಉತ್ತಮವಾಗಬೇಕು ಅನ್ನುವುದಾದರೆ, ಇಂದಿನ ದಿನದ ಕ್ಷಣಿಕ ಸುಖವನ್ನು ತ್ಯಾಗ ಮಾಡಬೇಕು...

**ಕಲ್ಲೊಳಗೆ ಹೊನ್ನುಂಟು; ಉದಕದೊಳಗೆ ಅಗ್ನಿಯುಂಟು;**
**ಹಾಲೊಳಗೆ ತುಪ್ಪವುಂಟು; ಅಂತರ್ಯಾಮಿಯಲ್ಲಿ ಶಿವನಿಹನು;**
**ಇದೇನು ಕತ್ತಲೆ ಕಾಣಬಾರದು, ತೋರಬಲ್ಲ ಗುರು ಸುಳಿಯನು ಕೂಡಲಸಂಗಮ ದೇವ.**



**ಡಾ. ಅಬ್ದುಲ್ ಕಲಾಮ್ ನುಡಿಯಂತೆ ದೊಡ್ಡ ಗುರಿಯ ಕನಸನ್ನು ನನಸು ಮಾಡುವ ಕಲೆ ಹೇಗೆ ಎನ್ನುವುದನ್ನು ಕಲಿತ ನಿಮ್ಮ ಹಲವು ವಿದ್ಯಾರ್ಥಿಗಳು ರಾಜ್ಯದ ಉದ್ದಗಲಕ್ಕೂ ಇದ್ದಾರೆ. ನಿಮ್ಮ ಪಾಠದ ಶೈಲಿಯಿಂದEnglish Literature ಗತಕಾಲದ ಕಥೆಯ ಅಳಿದುಳಿದ ತುಣುಕುಗಳು ಅಂತಾ ನಮ್ಗೆಲ್ಲಾ ಯಾವತ್ತೂ ಅನಿಸುತ್ತಿರಲಿಲ್ಲ. ಅಷ್ಟೊಂದು ನೈಜತೆ ನಿಮ್ಮ ಬೋಧನೆಯಲ್ಲಿತ್ತು.**

ಸರಳ ವ್ಯಕ್ತಿತ್ವದ ಡಾ. ಹೆಚ್. ನರಸಿಂಹಯ್ಯರ ವ್ಯಕ್ತಿತ್ವದ ಪ್ರತಿಬಿಂಬದಂತಿರುವ ಗುರುಗಳಿಗೆ ಗುರು ಪೂರ್ಣಿಮೆಯ ನಮನಗಳು. ಗುರುವಿನ ಪ್ರಭಾವಿತ ವಿಚಾರ, ಆಲೋಚನೆಗಳು ನಿರಂತರವಾಗಿ ಸಾಗಿ ಬೆಳಕಿನೆಡೆಗೆ ನಡೆಸುತ್ತಲಿರುತ್ತವೆ. ತಲೆಮಾರುಗಳ ವಾಸ್ತವಿಕ ಕತೆಯಾಗಿ ಯುವ ಜನತೆಯನ್ನು ಬಡಿದೆಬ್ಬಿಸುತ್ತಲೆ ಇರುತ್ತವೆ. ಸ್ವಾಮಿ ವಿವೇಕಾನಂದರ ವಾಣಿಯಂತೆ. ಸರ್, ನಿಮ್ಮ ಹೋರಾಟದ ಹಾದಿಯ ಕೆಲ ವರ್ಷಗಳಲ್ಲಿ ನಾನು ನಿಮ್ಮ ವಿದ್ಯಾರ್ಥಿನಿ ಎಂಬುದು ಹೆಮ್ಮೆಯ ವಿಚಾರ. ಛಲ, ಹೋರಾಟ, ಸಾಧನೆ, ಪ್ರಯತ್ನ ಇವುಗಳಿಗೆ ಇನ್ನೊಂದು ಹೆಸರೇ ಬೀಳಗಿ ಸರ್.

Small aim is a Crime, have great aim ಡಾ. ಅಬ್ದುಲ್ ಕಲಾಮ್ ನುಡಿ ಯಂತೆ ದೊಡ್ಡ ಗುರಿಯ ಕನಸನ್ನು ನನಸು ಮಾಡುವ ಕಲೆ ಹೇಗೆ ಎನ್ನುವುದನ್ನು ಕಲಿತ ನಿಮ್ಮ ಹಲವು ವಿದ್ಯಾರ್ಥಿಗಳು ರಾಜ್ಯದ ಉದ್ದ ಗಲಕ್ಕೂ ಇದ್ದಾರೆ. ನಿಮ್ಮ ಪಾಠದ ಶೈಲಿಯಿಂದ English Literature ಗತಕಾಲದ ಕಥೆಯ ಅಳಿದುಳಿದ ತುಣುಕುಗಳು ಅಂತಾ ನಮ್ಗೆಲ್ಲಾ ಯಾವತ್ತೂ ಅನಿಸುತ್ತಿರಲಿಲ್ಲ. ಅಷ್ಟೊಂದು ನೈಜತೆ ನಿಮ್ಮ ಬೋಧನೆಯಲ್ಲಿತ್ತು. ನಿಮ್ಮ ಹೆಸರಿನೊಂದಿಗೆ ನೆನಪಾಗುತ್ತಿದ್ದು ಸದಾ ಲವಲವಿಕೆಯ ಹೊಮ್ಮನಸ್ಸಿನ ಒಂದು ಒಳನೋಟ ನಮ್ಮಲ್ಲಿ ಮೂಡುತ್ತಿತ್ತು. ಸಾಧನೆ ತಪಸ್ಸು ಅಂದುಕೊಂಡ ನಾವೆಲ್ಲ, ಆರ್ಥಿಕವಾಗಿ ಕುಟುಂಬದ ಅವಲಂಬಿತರಾಗಿ, ದೂರವಾಗಿ ಯಾವುದೇ ಗೋಜು, ಗೊಂದಲಗಳಿಲ್ಲದೆ ಸಾಧನೆ ಮಾಡಲು ಹೊರಡುತ್ತೇವೆ. ಗುರಿಯತ್ತ ಸಾಗುತ್ತೇವೆ. ಆದರೆ ಕುಟುಂಬದಲ್ಲಿ ಇದ್ದುಕೊಂಡು ಪರಿಸ್ಥಿತಿ ನಿಭಾಯಿಸಿ, ಕಾಪಾಡಿಕೊಂಡು ಜವಾಬ್ದಾರಿ ಹೊತ್ತು ಸಾಧನೆ ಮಾಡುವ ವಿರಳ ವ್ಯಕ್ತಿತ್ವದಲ್ಲಿ ನೀವು ಒಬ್ಬರು.

ಧಾರವಾಡ ಶ್ರೀ ನಗರದ ಮಹಡಿ ಹೆಂಚಿನ ಮನೆಯ ಒಂದು ಭಾಗ Tutorial, ಮತ್ತೊಂದು ಭಾಗದಲ್ಲಿ ಅಮ್ಮನ ಜೊತೆಗೆ ವಾಸ. ಅದೊಂದು ಚಿಕ್ಕ ಗಲ್ಲಿ ಮಹಡಿ ಮೆಟ್ಟಿಲುಗಳು ಚಿಕ್ಕ ಚಿಕ್ಕವಾಗಿದ್ದವು. ಆದರೆ ನಿಮ್ಮ ಕನಸಿನ ಮೆಟ್ಟಿಲುಗಳು ಗುರಿಯತ್ತ ದೀರ್ಘ ಮತ್ತು ಗಟ್ಟಿಯಾಗಿದ್ದವು. ಧಾರವಾಡದ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳು ನಿಮ್ಮ ವಿದ್ಯಾರ್ಥಿಗಳಾಗಿದ್ದರು. ಅದೊಂದು ವಿಶೇಷತೆಯ ಅನುಭವ ನಮಗೆಲ್ಲಾ ಆಗಿತ್ತು. ನೀವು ಪಾಠ ಮಾಡಿದ Othello, Macbeth, Shakesphear, Wordsworth, T.S. Eliot ನೆನಪಲ್ಲಿ ಸದಾ ಇರುತ್ತದೆ. ಜೊತೆಗೆ ನಿಮ್ಮ ಗುರುಗಳಾದ ಡಾ. ಗಿರಡ್ಡಿ ಗೋವಿಂದರಾಜ್, ಡಾ. ಚಂದ್ರಶೇಖರ ಪಾಟೀಲ್, ಕೀರ್ತಿನಾಥ ಕುರ್ತುಕೋಟಿ ಅವರ ವಿಚಾರಗಳನ್ನು ತಾರ್ಕಿಕವಾಗಿ ಹೇಳಿ ನಮಗೆಲ್ಲಾ ಸಮಗ್ರ ಸಾಹಿತ್ಯದ ರಸದೌತಣವನ್ನು ಬಡಿಸಿದ್ದೀರಿ.

ಕಲಾಭವನದಲ್ಲಿ ನಡೆಯುವ ಇಂಗ್ಲಿಷ್ ಡ್ರಾಮಾಗಳಿಗೆ ನಮ್ಮನ್ನೆಲ್ಲಾ ಕರೆದೊಯ್ದು ಜೊತೆಗೆ ಕೂತು ವಿಮರ್ಶಿಸುತ್ತಿದ್ದುದು ನಿಜಕ್ಕೂ ಅವಿಸ್ಮರಣೀಯ ಅನುಭವ. ನಿಮ್ಮ ಪಾಠದ ವೈಖರಿ ಈ ರೀತಿ ಇರುವಾಗ literature ಒಂದು History ಅಂತ ನಮಗೆಲ್ಲಾ ಅನಿಸೋಕೆ ಹೇಗೆ ಸಾಧ್ಯ. ಪದವಿ ಮುಗಿದ ಹಲವು ವರ್ಷಗಳ ನಂತರ ನಿಮ್ಮನ್ನು ಭೇಟಿಯಾಗಿದ್ದು, ನೀವು ನಮ್ಮ ಜಿಲ್ಲೆ ದಾವಣಗೆರೆ ಜಿಲ್ಲಾಧಿಕಾರಿಯಾಗಿ ಬಂದಾಗ ಅದೇ ಸರಳ ನಡೆ, ನುಡಿ, ದೇಶಿ ಶೈಲಿಯ ಪಂಚೆಯ ಚಿತ್ರಣದಲ್ಲಿ ಹುದ್ದೆ ಬದಲಾಯಿಸಿದ ಬೀಳಗಿ ಸರ್ ನನಗೆ ಕಾಣಲೇ ಇಲ್ಲ. ಅದೇ ನೈಜತೆಯ ಗುರುಗಳನ್ನು ನೋಡಿ ಮನತುಂಬಿ ಮಾತಾಡಿ ಗುರು-ಶಿಷ್ಯರ ಸಂಬಂಧ ದುಪ್ಪಟ್ಟಾದ ಅನುಭವ ಆಯಿತು.

ನಿಮ್ಮಲ್ಲಿದ್ದ ಸಾಮಾಜಿಕ ಕಳಕಳಿ ನಿಮ್ಮನ್ನು ಈ ಎತ್ತರಕ್ಕೆ ತಂದು ನಿಲ್ಲಿಸಿದೆ. ಕೋವಿಡ್-19 ರಲ್ಲಿ ನೀವು ತೋರಿದ ಜವಾಬ್ದಾರಿ ಮತ್ತು ಕಾರ್ಯ ಚಟುವಟಿಕೆ, ಓಡಾಟದಲ್ಲಿ ಅದೇ ಹುಮ್ಮಸ್ಸಿನ ಗುರುಗಳನ್ನು ನೋಡಿದಂತಾಯಿತು. ಒಬ್ಬ ಆದರ್ಶ ಗುರು ಮಗನಾಗಿ ಇರುವುದನ್ನು ನೋಡಿದ ನಮಗೆಲ್ಲಾ ಆದರ್ಶ ಜಿಲ್ಲಾಧಿಕಾರಿಯಾಗಿ ನೋಡಲು ಸಂತೋಷ ಮತ್ತು ಹೆಮ್ಮೆಯಾಗುತ್ತದೆ.

ಜೀವನದ ಪ್ರತಿ ಯೊಂದು ಆಯಾಮದಲ್ಲಿ ಪ್ರಭಾವಿತ ಗುರು ವಿನ ಆಚಾರ, ವಿಚಾರಗಳು ಪ್ರತಿಜ್ವಲಿಸುತ್ತಲಿರುತ್ತವೆ. ಸಾವಿರಾರು ವಿದ್ಯಾರ್ಥಿಗಳಿಗೆ ಆದರ್ಶವಾಗಿದ್ದ ನೀವು, ಸಾರ್ವಜನಿಕ ಆಡಳಿತದಲ್ಲಿ ಅಚ್ಚಳಿಯದ ಕೆಲಸಗಳಿಂದ ಮಾದರಿ ಜಿಲ್ಲೆಯನ್ನಾಗಿ ಮಾಡುತ್ತೀರಾ ಎಂಬ ನಂಬಿಕೆಯಿಂದ ಗುರು ಪೂರ್ಣಿಮೆಯ ವಂದನೆಗಳು.

**- ವೀಣಾ ಹೆಚ್.ಎಂ.**
ಬಾಪೂಜಿ ಎಂ.ಬಿ.ಎ. ಗ್ರಂಥಪಾಲಕರು,
ದಾವಣಗೆರೆ.

# 'ಗೋಲ್ಡನ್ ಬನ್ಸಿ' ಕೇಸರಿ ರವೆಯೇ ಒರಿಜಿನಲ್ ಗ್ರಾಹಕರು ಎಚ್ಚರಿಕೆ ವಹಿಸಲು ಕಂಪನಿ ಕರೆ

ಶ್ರೀ ಕೈಲಾಸ್ ಗ್ರೇನ್ ಮಿಲ್ಸ್‌ನ ಉತ್ಪಾದನೆಯಾದ ಗೋಲ್ಡನ್ ರವಾ ಬನ್ಸಿ ದೇಶದ ಎಫ್.ಎಸ್.ಎಸ್.ಸಿ. 22000 ಪ್ರಮಾಣೀಕೃತವಾಗಿದೆ. ಕಂಪನಿಯು ಪ್ರತಿದಿನ 225 ಟನ್ ಉತ್ಪಾದನಾ ಸಾಮರ್ಥ್ಯ ಹೊಂದಿದ್ದು, ಇದು ಈ ವರ್ಗದಲ್ಲಿ ಭಾರತದಲ್ಲೇ ಅತಿ ಹೆಚ್ಚಿನ ಉತ್ಪಾದನೆಯಾಗಿದೆ.



ಒರಿಜಿನಲ್ ಗೋಲ್ಡನ್ ಬನ್ಸಿ ಕೇಸರಿ ರವೆ

ಪ್ರತಿಯೊಬ್ಬ ಗ್ರಾಹಕರಿಗೆ ಸುರಕ್ಷಿತ ಹಾಗೂ ಆರೋಗ್ಯಕರ ಉತ್ಪನ್ನ ಒದಗಿಸುವುದು ಕಂಪನಿಯ ಉದ್ದೇಶವಾಗಿದೆ. ಕಂಪನಿಯ ಉತ್ಪನ್ನಗಳು ಯಾಂತ್ರೀಕೃತವಾಗಿದ್ದು, ಪೌಷ್ಠಿಕಾಂಶದಿಂದ ಸಮೃದ್ಧವಾಗಿವೆ ಹಾಗೂ ಕಠಿಣ ಗುಣಮಟ್ಟ ಮಾನದಂಡಗಳಿಗೆ ಒಳಪಡುತ್ತಿವೆ. ವಿಶ್ವ ದರ್ಜೆಯ ಮಾನದಂಡಗಳನ್ನು ಪಾಲಿಸುತ್ತಾ ರುಚಿಯಲ್ಲೂ ಉತ್ಕೃಷ್ಟವಾಗಿದೆ ಎಂದು ಕಂಪನಿ ತಿಳಿಸಿದೆ.

ಗೋಲ್ಡನ್ ಬನ್ಸಿ ಬ್ರಾಂಡ್ ಮೂಲಕ ಕಂಪನಿಯು ರವೆಯನ್ನು ಪೂರೈಸುತ್ತಿದೆ. ಗೋಲ್ಡನ್ ಬನ್ಸಿ ಪ್ರೀಮಿಯಮ್ ಕ್ವಾಲಿಟಿಯ ಕೇಸರಿ ರವೆಯನ್ನು ಕಂಪನಿಯು ಉತ್ಕೃಷ್ಟ ದರ್ಜೆಯೊಂದಿಗೆ ಪೂರೈಸುತ್ತಿದೆ ಎಂದು ಕಂಪನಿಯ ಪ್ರಕಟಣೆಯಲ್ಲಿ ಹೇಳಲಾಗಿದೆ.

ಆದರೆ, ಕೆಲ ಅಂಗಡಿಯವರು ಗೋಲ್ಡನ್ ಬನ್ಸಿ ರವೆಯನ್ನು ಕೇಳಿದಾಗ ಬೇರೆ ಬ್ರಾಂಡ್‌ನ ರವೆಯನ್ನು ಕೊಡುವುದು ಕಂಡು ಬರುತ್ತಿದೆ. ಕೆಲವರು ಗೋಲ್ಡನ್ ಬನ್ಸಿ ಮಾದರಿಯಲ್ಲೇ ಗೋಲ್ಡ್ ಬನ್ಸಿ ಎಂದು ಹೇಳುತ್ತಾ ಗ್ರಾಹಕರನ್ನು ತಪ್ಪು ದಾರಿಗೆ ಎಳೆಯುತ್ತಿರುವುದು ಕಂಡು ಬಂದಿದೆ.

ಈ ಬಗ್ಗೆ ಗ್ರಾಹಕರು ಹಾಗೂ ವರ್ತಕರು ಎಚ್ಚರವಾಗಿರಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ. ಗೋಲ್ಡನ್ ಬನ್ಸಿ ರವೆ ಉತ್ಕೃಷ್ಟ ಹಾಗೂ ನೈಜದ್ದಾಗಿದೆ. ಇದರ ಅಣಕು ಉತ್ಪನ್ನಗಳಿಂದ ಗ್ರಾಹಕರು ದೂರವಿರಬೇಕೆಂದು ಕೋರುತ್ತೇವೆ. ಗೋಲ್ಡನ್ ಬನ್ಸಿ ಹೆಸರಿನಲ್ಲಿ ನಕಲಿ ಉತ್ಪನ್ನಗಳನ್ನು ಮಾರುವವರ ವಿರುದ್ಧ ಕಾನೂನು ಕ್ರಮಗಳನ್ನೂ ತೆಗೆದುಕೊಳ್ಳುವುದಾಗಿ ಕಂಪನಿ ಹೇಳಿದೆ.

**ಕಂಪನಿ ವಾರ್ತೆ**

# ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಿಂದ ಆಷಾಢ ಪ್ರೈಸ್ ಪ್ರಾಮಿಸ್ ಅಭಿಯಾನ ಆರಂಭ

ದಾವಣಗೆರೆ, ಜು.4 - ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ರಾಜ್ಯಾದ್ಯಂತ ಆಷಾಢ ಪ್ರೈಸ್ ಪ್ರಾಮಿಸ್ ಅಭಿಯಾನವನ್ನು ಆರಂಭಿಸಲಾಗಿದೆ. ಈ ಅಭಿಯಾನದಲ್ಲಿ ಗ್ರಾಹಕರಿಗೆ ವಿವಿಧ ಬಗೆಯಲ್ಲಿ ಹಲವಾರು ಆಫರ್‌ಗಳನ್ನು ನೀಡಲಾಗುತ್ತಿದ್ದು, ಈ ಆಫರ್ ಆಗಸ್ಟ್ 2 ವರೆಗೆ ಇರಲಿದೆ.




ಅದರ ಅನ್ವಯ, ಚಿನ್ನಾಭರಣಗಳ ಮೇಕಿಂಗ್ ಚಾರ್ಜಸ್‌ನಲ್ಲಿ ಶೇ. 20% ರಿಂದ 50% ಡಿಸ್ಕೌಂಟ್, ವಜ್ರದ ಮೌಲ್ಯದಲ್ಲಿ 25% ವರೆಗೆ ಡಿಸ್ಕೌಂಟ್, 22 ಕ್ಯಾರೆಟ್ ಹಳೆಯ ಚಿನ್ನದ ವಿನಿಮಯದ ಮೇಲೆ 0% ಕಡಿತ, ಮುಂಗಡವಾಗಿ 10% ರಿಂದ ಪಾವತಿಸುವ ಮೂಲಕ ಆಭರಣಗಳನ್ನು ಕಾಯ್ದಿರಿಸಿ ಮತ್ತು ಚಿನ್ನದ ದರದಲ್ಲಾಗುವ ಏರಿಳಿತದಿಂದ ಸಂರಕ್ಷಣೆ ಹಾಗೂ ನಿಮ್ಮ ಹಳೆಯ ಚಿನ್ನಕ್ಕೆ ಗರಿಷ್ಠ ಮೌಲ್ಯ ನೀಡಲಾಗುವುದು ಎಂದು ಕಂಪನಿ ತಿಳಿಸಿದೆ.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಹಳೆಯ ಚಿನ್ನಾಭರಣಗಳನ್ನು ಖರೀದಿ ಮಾಡಲಿದೆ. ಆಭರಣಗಳನ್ನು ಎಲ್ಲಿಯೇ ಖರೀದಿ ಮಾಡಿದ್ದರೂ ಅವುಗಳನ್ನು ಖರೀದಿಸಲಾಗುತ್ತದೆ. ಈ ಕೊಡುಗೆ ಎಲ್ಲಾ ಶೋ ರೂಂಗಳಲ್ಲಿಯೂ ಲಭ್ಯವಿದೆ. ಕೆವೈಸಿ ಮಾರ್ಗಸೂಚಿಗಳನ್ವಯ ಪೇಮೆಂಟ್ಸ್ ಅನ್ನು ಚೆಕ್ ಅಥವಾ ಆರ್‌ಟಿಜಿಎಸ್ ಮೂಲಕ ಮಾಡಲಾಗುತ್ತದೆ.

ಗ್ರಾಹಕರು ಶೇ.10 ರಷ್ಟು ಹಣವನ್ನು ಪಾವತಿಸಿ ಆಭರಣಗಳನ್ನು ಮುಂಗಡವಾಗಿ ಬುಕ್ ಮಾಡಬಹುದಾಗಿದೆ. ಇದರಿಂದ ಚಿನ್ನಾಭರಣಗಳ ಬೆಲೆ ಏರಿಕೆಯ ಹೊರೆಯನ್ನು ಕಡಿಮೆ ಮಾಡಿಕೊಳ್ಳಬಹುದಾಗಿದೆ. ಈ ಆಫರ್ ಅನ್ನು ಪಡೆಯುವುದರೊಂದಿಗೆ ಗ್ರಾಹಕರು ಕಾಯ್ದಿರಿಸಿದ ದರ ಅಥವಾ ಚಾಲ್ತಿಯಲ್ಲಿರುವ ಮಾರುಕಟ್ಟೆಯ ದರ ಇದರಲ್ಲಿ ಯಾವುದು ಕಡಿಮೆ ಇರುತ್ತದೋ ಆ ದರದಲ್ಲಿ ಚಿನ್ನಾಭರಣಗಳನ್ನು ಖರೀದಿಸಬಹುದಾಗಿದೆ.

ಇದಲ್ಲದೇ, ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಗ್ರಾಹಕರಿಗೆ ಆನ್‌ಲೈನ್ ಮೂಲಕ ಆಭರಣಗಳ ಖರೀದಿಯ ಸೌಲಭ್ಯವನ್ನೂ ನೀಡುತ್ತಿದೆ. ಗ್ರಾಹಕರು www.malabargoldanddiamonds.comಗೆ ಭೇಟಿ ನೀಡಿ ತಮ್ಮ ನೆಚ್ಚಿನ ಆಭರಣಗಳನ್ನು ಖರೀದಿಸಬಹುದಾಗಿದೆ ಎಂದು ಕಂಪನಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಒಂದೇ ದಿನ 22 ಸಾವಿರ ಜನರಿಗೆ ಕೊರೊನಾ

ನವದೆಹಲಿ, ಜು. 4 – ದೇಶದಲ್ಲಿ ಒಂದೇ ದಿನ 22,771 ಕೊರೊನಾ ಪ್ರಕರಣಗಳು ಕಾಣಿಸಿಕೊಂಡಿವೆ. ಇದೇ ದಿನ 442 ಜನರು ಸಾವನ್ನಪ್ಪಿದ್ದಾರೆ.ಕೊರೊನಾದಿಂದ ಗುಣ ಹೊಂದುತ್ತಿರುವವರ ಸಂಖ್ಯೆಯೂ ಹೆಚ್ಚಾಗಿದೆ. ಒಂದೇ ದಿನದಲ್ಲಿ 14,335 ಜನರು ಗುಣವಾಗಿದ್ದು, ಒಟ್ಟು ಗುಣ ಹೊಂದಿದವರ ಸಂಖ್ಯೆ 3,94, 226ಕ್ಕೆ ತಲುಪಿದೆ. ದೇಶದಲ್ಲಿ ಈಗ 2,35,433 ಸಕ್ರಿಯ ಸೋಂಕಿತರಿದ್ದಾರೆ. ಶನಿವಾರ ಕೊರೊನಾದಿಂದ ಚೇತರಿಸಿಕೊಂಡವರು ಶೇ.60.81ಕ್ಕೆ ಏರಿಕೆಯಾಗಿದೆ.


**ಮನೆ ಬಾಡಿಗೆಗೆ ಇದೆ**
MCC 'A' block,
2nd Main, 2nd Cross,
1 BHK 2nd Floor,
Fully Furnished
Prakash R.
80734 70383

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್, 11 ನೇ ಮೇನ್ 3 ನೇ ಕ್ರಾಸ್, ಬಾಪೂಜಿ ಹೈಸ್ಕೂಲ್ ಹತ್ತಿರ ಮೊದಲ ಮಹಡಿಯಲ್ಲಿ ವಾಸ್ತು ಪ್ರಕಾರ ಉತ್ತರಕ್ಕೆ ಬಾಗಿಲಿರುವ ಬೋರವೆಲ್ ಮತ್ತು ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಎರಡು ಬೆಡ್ ರೂಂ, ಇರುವ ಮನೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ
Ph : 94480 46613

**2 BHK ಮನೆ ಲೀಸ್‌ಗೆ ಇದೆ**
4ನೇ ಮೇನ್, 1ನೇ ಕ್ರಾಸ್, 1ನೇ ಫ್ಲೋರ್ ವಿನೋಬನಗರದಲ್ಲಿ ಮನೆ ಲೀಸ್‌ಗೆ ಇದೆ. ಸಂಪರ್ಕಿಸಿ :
90193 51373

**ವಾಸ್ತು ಮನೆ ಬಾಡಿಗೆಗೆ**
ವಾಸ್ತುವಿನ ಪೂರ್ವ ಬಾಗಿಲಿನ ಗ್ರೌಂಡ್ ಫ್ಲೋರ್ 2 ಬೆಡ್‌ರೂಂ, ಡೈನಿಂಗ್ ರೂಂ, ಹಾಲ್, ನೀರಿನ ಸೌಕರ್ಯ ಪಾರ್ಕಿಂಗ್ ಮನೆ ಸಂಮೃದ್ಧಿ #408 8 ನೇ ಮುಖ್ಯ, 8ನೇ ಅಡ್ಡ ರಸ್ತೆ ಪಿ.ಜೆ.ಬಡಾವಣೆ ಡಾ|| ನವೀನ್ ನಾಡಿಗ್ ಕ್ಲಿನಿಕ್ ಹತ್ತಿರ. ಸಂಪರ್ಕಿಸಿ
99168 62900, 93807 97651

**ಎರೆಹುಳು ಗೊಬ್ಬರ ಹಾಗೂ ಸಿಟಿ ಕಾಂಪೋಸ್ಟ್ ದೊರೆಯುತ್ತದೆ**
License No - JDA/F&PP/
KAR/FE19-200282/2019-20
93411 71212, 81054 98069

**ವಧು ಬೇಕಾಗಿದೆ**
ವಯಸ್ಸು 34 BA, B.Ed, MA ಕಲಿತಿರುವ ಸರ್ಕಾರಿ ಕೆಲಸದಲ್ಲಿರುವ ಯಾದವ ಜಾತಿ ವರನಿಗೆ ಯಾವುದೇ ಜಾತಿಯ ಸುಂದರವಾದ ವಧು ಬೇಕು, ಬಡವರಾದರೂ ಪರವಾಗಿಲ್ಲ, ಸರಳ ಮತ್ತು ಶೀಘ್ರ ವಿವಾಹಕ್ಕೆ ಆದ್ಯತೆ.
99456 82243

**Mayur Consultancy Services**
- Constructions
- Building Plans
- Approval Drawings
- Estimates
- 3D Elevations
- Simple Vaastu
Er. Mayur H N
B.E. (Civil), MBA, M.Tech, MIE
98444 88838

**Home Tution 100% Result**
Bsc,B.Ed, Msc ಮಾಡಿರುವ ಶಿಕ್ಷಕರು ನಿಮ್ಮ ಮನೆಗೇ ಬಂದು ಪಾಠ ಮಾಡುವರು
(Maths, Science)
89513 97381
88929 82490

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ರಶ್ಮಿ ಹಾಸ್ಟೆಲ್ ಬಳಿ ದೂಡಾ ಫೈನಲ್ಸ್ ಅಪ್ರೂವಲ್ ಪಶ್ಚಿಮ ಮುಖದ ಸೈಟ್ ಮಾರಾಟಕ್ಕಿದೆ.
ಅಳತೆ: 50x(52+56/2).
ಸಂಪರ್ಕಿಸಿ: 91645 17536

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಭಗತ್‌ಸಿಂಗ್ ನಗರ 1ನೇ ಮೇನ್, 3ನೇ ಕ್ರಾಸ್ (#688/10) ಗ್ರೌಂಡ್ ಫ್ಲೋರ್‌ನಲ್ಲಿ 2BHK, 2ನೇ ಮಹಡಿಯಲ್ಲಿ 2 BHK, 3ನೇ ಮಹಡಿಯಲ್ಲಿ ಸಿಂಗಲ್ ಅಟ್ಯಾಚ್ಡ್ ಬಾತ್ ರೂಂ ಇರುವ ಮನೆ ಬಾಡಿಗೆಗೆ ಇದೆ. ನಲ್ಲಿ ಹಾಗೂ ಬೋರ್ ನೀರಿನ ಸೌಲಭ್ಯವಿದೆ.
94486 67486, 78291 75732

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**ಸುವರ್ಣಾವಕಾಶ**
ಹೋಲ್‌ಸೇಲ್ ದರದಲ್ಲಿ ಅಗರಬತ್ತಿ ಕೊಂಡುಕೊಳ್ಳವವರು ಮತ್ತು ಮಾರುವವರು ಬೇಕಾಗಿದ್ದಾರೆ. ತಿಂಗಳ ಆದಾಯ 15000 ದಿಂದ 30000 ಒಳ್ಳೆಯ ಸುವರ್ಣಾವಕಾಶ.
89712 81856, 72592 22590
88675 15890

**House For Rent Long Term & Short Term Available**
with all Amenities cot, bed, fan, light, UPS internet, T.V Dining table, Geyser, Kitchen, Stove, Gas etc.
94800 73451

**HOUSE FOR RENT.**
For office (commercial) use only. Three bed Room in first Floor. First bus stop main Road. Vidayanagara.
Mob 9008525105

**ಹೆಸರು ಬದಲಾವಣೆ**
ದಾವಣಗೆರೆ ಲೇಬರ್ ಕಾಲೋನಿ 1 ನೇ ಮೇನ್ 9ನೇ ಕ್ರಾಸ್ (#920/223) ವಾಸಿಯಾದ ಅಜ್ಜಯ ಎನ್.ಜಿ ಆದ ನಾನು ಈ ಮೂಲಕ ದೃಢೀಕರಿಸುವುದೇನೆಂದರೆ ಕರಿಬಸಜ್ಜಯ ಎನ್.ಜಿ ಎಂದು ಇದ್ದ ನನ್ನ ಹೆಸರನ್ನು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ಅಜ್ಜಯ ಎನ್.ಜಿ ಎಂದು ಬದಲಾಯಿಸಿ ಕೊಂಡಿರುತ್ತೇನೆ. ಮುಂದಿನ ನನ್ನ ಎಲ್ಲಾ ವ್ಯವಹಾರಗಳು ಅಜ್ಜಯ ಎನ್.ಜಿ ಹೆಸರಿನಲ್ಲೇ ನಡೆಯುತ್ತವೆ.
- ಅಜ್ಜಯ ಎನ್.ಜಿ

**ಕೇವಲ 30 ದಿನಗಳಲ್ಲಿ**
ನುರಿತ ಶಿಕ್ಷಕರಿಂದ ಕಂಪ್ಯೂಟರ್ ಮತ್ತು ಮೊಬೈಲ್ ರಿಪೇರಿ ತರಬೇತಿಯೊಂದಿಗೆ ಉಚಿತ ವಸತಿ ಮತ್ತು Latest Problem solved DVD kit ನೀಡಲಾಗುವುದು.
ಫ್ಯೂಚರ್ ಕೇರ್
99029 99615
99025 45387

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಕಟ್ಟಡ ಬಾಡಿಗೆಗೆ ಇದೆ**
ಶಾಮನೂರು ರಸ್ತೆ BIET ಗೆಸ್ಟ್ ಹೌಸ್ ಪಕ್ಕ 60x60 ಅಳತೆಯಲ್ಲಿ ಕಟ್ಟಿರುವ ಮೂರು ಅಂತಸ್ತಿನ ಕಟ್ಟಡ ಹಾಸ್ಟೆಲ್, ಕಾಲ್ ಸೆಂಟರ್ ಹಾಗೂ ಇತರೆ ಕಛೇರಿ ನಡೆಸಲು ಸೂಕ್ತವಾಗಿದ್ದು ಎಲ್ಲಾ ಸೌಕರ್ಯ ಹೊಂದಿದೆ.
Mob : 98441 42797
98441 09379, 99727 00091

**ಮನೆ ಬಾಡಿಗೆಗೆ / ಲೀಸ್ ಗೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ ಅಥವಾ ಲೀಸ್ ಗೆ ಇವೆ.
99726-75759

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 2ನೇ ಬಸ್ ಸ್ಟಾಪ್ 3ನೇ ಮೇನ್, 3ನೇ ಕ್ರಾಸ್ ಕಸ್ತೂರಿ ಬಾ ಸಮಾಜದ ಹತ್ತಿರ ಮೊದಲನೇ ಮಹಡಿಯಲ್ಲಿ ಡಬಲ್ ಬೆಡ್ ರೂಮ್ ಮನೆ ಬಾಡಿಗೆಗೆ ಇದೆ (ಸಸ್ಯಹಾರಿಗಳಿಗೆ ಮಾತ್ರ)
98452 62010,
93432, 40567

**ವಿಜಿ ಬೆಣ್ಣೆದೋಸೆ ಹೋಟೆಲ್**
ಹೋಟೆಲ್ ತೆರೆದಿದೆ.
ಕೇವಲ ಪಾರ್ಸೆಲ್ ಮಾತ್ರ.
ಸಾಮಾಜಿಕ ಅಂತರ ಇರುವುದು ಮತ್ತು ಮಾಸ್ಕ್ ಧರಿಸುವುದು ಕಡ್ಡಾಯ.
90607-34025
ಬೆಳಿಗ್ಗೆ 8 ರಿಂದ 12. ಸಂಜೆ 5 ರಿಂದ 7ರವರೆಗೆ

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
83103 14540

**ವಾಹ್ ಚಾಯ್ !! ರಿಚ್ ಚಾಯ್ !!**
SRK TEA
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 32427
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ರಿಜಿಸ್ಟ್ರೇಷನ್‌ಗಳಿಗಾಗಿ ಸಂಪರ್ಕಿಸಿ**
ನಾವುಗಳು ನಿಧಿ ಬ್ಯಾಂಕ್, ನಿಧಿ ಕಂಪನಿ, ಕಂಪನಿಗಳು , FSSI, Annual Compliance ಇನ್ನೂ ಎಲ್ಲಾ ತರಹದ ರಿಜಿಸ್ಟ್ರೇಷನ್‌ಗಳು, ಕಂಪನಿಗಳ ಲೆಕ್ಕ ಪರಿಶೋಧನೆ ಮಾಡಿಕೊಡುತ್ತೇವೆ.
ಸಂಪರ್ಕಿಸಿ : 63619 35009

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮನೆ ಪಾಠ ಮಾಡಲು ಶಿಕ್ಷಕರು ಬೇಕಾಗಿದ್ದಾರೆ**
CBSE 4ನೇ ತರಗತಿಯ ಪ್ರತಿಭಾನ್ವಿತ ವಿದ್ಯಾರ್ಥಿನಿಗೆ ಮನೆಗೇ ಬಂದು ಪಾಠ ಮಾಡಲು ಉತ್ತಮ ಕೌಶಲ್ಯವಿರುವ, ಪದವಿ ಅಥವಾ ಉನ್ನತ ಪದವಿ ಹೊಂದಿರುವ ಶಿಕ್ಷಕರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ:
94819 09848

**ನೇರ ಪರೀಕ್ಷೆಗಳು**
DIRECT EXAMS
PUC, Commerce, Arts, Science
ಎಸ್.ಎಸ್.ಎಲ್.ಸಿ. NTC, ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
ಮಾನಸ ವಿದ್ಯಾಸಂಸ್ಥೆ (ರಿ.)
ಎಲ್.ಕೆ.ಕಾಂಪ್ಲೆಕ್ಸ್ 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ. 9740258276
ಕೆಲವೇ ಸೀಟುಗಳಿವೆ.

**RENT AVAILABLE**
Ground Floor (East Facing)
Spacious hall 20x50 sqft
near Ram and co circle
Davangere
94485 67522

**ಸಾಲಗಳಿಗಾಗಿ ಸಂಪರ್ಕಿಸಿ**
ವಾರ್ಷಿಕ 8% ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ, ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ, ವ್ಯವಸಾಯ, ವ್ಯವಹಾರ, ಪರ್ಸನಲ್ ಲೋನ್, ಬಂಗಾರ ಸಾಲಗಳು, 60 ಪೈಸೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳಿಗೆ ಸಂಪರ್ಕಿಸಿ :
73385 80345

## ಕೋವಿಡ್ ಕಾಂಚಾಣ !!!



ಬ್ರೋ ನಮ್ಮ ಆರ್ಥಿಕ ಸ್ಥಿತಿ ತುಂಬಾ ಲಾಸ್ ನಲ್ಲಿ ಐತೆ. ಈ ಕೋವಿಡ್ ಜಮಾನದಲ್ಲಿ ದುಡ್ಡು ಮಾಡೋದು ಹೇಗೆ.?

**ಬ್ರದರ್ ಈ ದುಡ್ಡು ಮಾಡೋದು ಒಂದು ಕಲೆ. ಅದು ಎಲ್ಲರಿಗೂ ಒಲಿಯೋದಿಲ್ಲ. ಇದಕ್ಕೇ ಬಿಸಿನೆಸ್ ಟ್ಯಾಕ್ಟಿಸ್ ಬೇಕು. ಪರಿಸ್ಥಿತಿಯನ್ನು ಬಂಡವಾಳ ಮಾಡಿಕೊಳ್ಳೋ ಕಲೆ ಬಂಡವಾಳಶಾಹಿಗಳಿಗೆ ಮಾತ್ರ ಗೊತ್ತಿರುತ್ತೆ.**

ಹಂಗಂತಿಯಾ?

**ಹ್ಞೂಂನೋ ಮಾರಾಯಾ. ಸದ್ಯಕ್ಕೆ ಎಲ್ಲರೂ ದುಡ್ಡು ಮಾಡೋಕೆ ಆಗೋಲ್ಲ. ಕೆಲವರನ್ನು ಬಿಟ್ಟು!**

ಕೆಲವರು ಅಂದ್ರೆ ಯಾರು ಯಾರಪಾ? ಅದು ಹೆಂಗೆ?

**ನೋಡಪಾ. ಈ ಕೋವಿಡ್ ವಿಷಯದಲ್ಲಿ, ಒಂದು ಸಾರಿ ಗಂಟಲು ದ್ರವ ಸ್ಯಾಂಪಲ್ ಟೆಸ್ಟ್ ಮಾಡೋಕೆ ನಾಲ್ಕು ಸಾವಿರ ರೂಪಾಯಿ. ಪಾಸಿಟಿವ್ ಅಂತಾ ರಿಸಲ್ಟ್ ಬಂದ್ರೇ ಒಬ್ಬರಿಗೆ ನಾಲ್ಕು ಲಕ್ಷ ರೂಪಾಯಿ ಖರ್ಚಾಗುತ್ತೆ. ನಾಲ್ಕು ಸಾವಿರ ಜನರಿಗೆ ಕೇವಲ ಟೆಸ್ಟ್ ಮಾಡೋಕೆ ಒಂದೂವರೆ ಕೋಟಿ! ಕೇವಲ ನಾಲ್ಕು ನೂರು ಪಾಸಿಟಿವ್ ಪೇಷೆಂಟ್ಸ್ ಟ್ರೀಟ್ ಮಾಡೋಕೆ ಹದಿನಾರು ಕೋಟಿ!**

ಹೌದಲ್ಲಾ!

**ಒಂದೊಂದು ಜಿಲ್ಲೆಯಲ್ಲಿ ಸರ್ಕಾರದ ಬೊಕ್ಕಸದಿಂದ ಎಷ್ಟು ಖರ್ಚಾಗಿರಬಹುದು? ಇದನ್ನು ಕ್ರಾಸ್ ಚೆಕ್ ಮಾಡೋಕೆ ಸದ್ಯಕ್ಕೆ ಯಾರ ಕೈಯಿಂದಾನೂ ಆಗೊಲ್ಲ. ಉತ್ತರ ಭಾರತದ ಕೆಲವು ಜಿಲ್ಲೆಗಳಲ್ಲಿ ಸುಳ್ಳು ಸುಳ್ಳೇ ಕೇಸ್ ಸೃಷ್ಟಿ ಮಾಡಿ ಲೆಕ್ಕ ತೋರಿಸಿ, ಇವರು ದುಡ್ಡು ಮಾಡಿದಾರೆ ಅಂತಾ ಸುದ್ದಿ.**

ಯಾರು?

**ಅಧಿಕಾರಿಗಳು!! ಜನಪ್ರತಿನಿಧಿಗಳು !!!**

ಈಗ ನಾವೂ ಒಂದು ಕೋವಿಡ್ ಟೆಸ್ಟಿಂಗ್ ಲ್ಯಾಬ್ ಶುರು ಮಾಡಿ ಈ ಡಾಕ್ಟರ್ ಗಳನ್ನು ಬುಕ್ ಮಾಡಿಕೊಂಡರೆ ದುಡ್ಡು ಮಾಡಬಹುದಲ್ವಾ !? ಬರುವ ಪೇಷೆಂಟ್ ಗಳಿಗೆ ಮೊದಲಿಗೇ ಕೋವಿಡ್ ಟೆಸ್ಟ್ ಮಾಡಿಸಿಕೊಂಡು ಬನ್ನಿ ಅಂತಾ ಅವರು ನಮ್ಮ ಹತ್ತಿರ ಕಳುಹಿಸ್ತಾರೆ. ನಾವು ದುಡ್ಡು ಇಸ್ಕೊಂಡು ಟೆಸ್ಟ್ ಮಾಡೋದು. ಅದರಲ್ಲೇ ಡಾಕ್ಟರ್ ಗಳಿಗೆ ಕಮೀಷನ್ ಕೊಡೋದು.

**ಗುರೂ ಇದು ನಾವು ಅಂದುಕೊಂಡಷ್ಟು ಸುಲಭವಲ್ಲ. ಇದಕ್ಕೆ ಬ್ಯಾಕ್ ಗ್ರೌಂಡಿನಲ್ಲಿ ದೊಡ್ಡ ಪ್ರಭಾವ ಇರಬೇಕು.**



- ಆರ್.ಟಿ.

ಆಯ್ತು, ಈ ಬೇರೆ ಬೇರೆ ದುಡಿಮೆ ಮಾಡೋರು ಯಾವ ರೀತಿ ದುಡಿಮೆ ಮಾಡಬಹುದು?

**ನಾನು ಮೊದಲೇ ಹೇಳಿದ ಹಾಗೇ ಸಂದರ್ಭಕ್ಕೆ ತಕ್ಕಂತೆ ಈ ಟ್ಯಾಕ್ಟಿಸ್ ಉಪಯೋಗಿಸುತ್ತಾರೆ. ಉದಾಹರಣೆಗೆ ಗಾರ್ಮೆಂಟ್ ಫ್ಯಾಕ್ಟರಿಯವರು ಕೋವಿಡ್ ರೆಸಿಸ್ಟೆನ್ಸ್ ಬಟ್ಟೆಗಳು, ಡಿಸೈನ್ಡ್ ಮಾಸ್ಕ್ ಗಳು ಅಂತಾ ಮಾರ್ಕೆಟಲ್ಲಿ ಬಿಟ್ಟಿದಾರೆ. ಡಿಸ್ಟಿಲರಿಯವರು ಆಲ್ಕೋಹಾಲ್ ಗೆ ಪರ್ಫ್ಯೂಮ್ ಮಿಕ್ಸ್ ಮಾಡಿ ಸ್ಯಾನಿಟೈಸರ್ ಪ್ರೊಡಕ್ಷನ್ ಶುರು ಮಾಡಿದ್ದಾರೆ.**

ಹೌದು.

**ಇಷ್ಟರಲ್ಲಿಯೇ ಕೋವಿಡ್ ಕಾಫ್ ಸಿರಪ್ ಅಂತಾ ಔಷಧಿ ಕಂಪೆನಿಗಳು ಶುರು ಮಾಡುತ್ತವೆ. ಕೋವಿಡ್ ಫ್ರೀ ಇಡ್ಲಿ ಮಿಕ್ಸ್, ಸಾಂಬಾರ್ ಪುಡಿ ಇತ್ಯಾದಿ ಅಂತಾ ಫುಡ್ ಪ್ರೊಡಕ್ಟ್ಸ್ ಕಂಪನಿಗಳು ಶುರು ಹಚ್ಚಿಕೊಳ್ತಾವೆ. ಒಟ್ಟಾರೇ ಏನೇ ಮಾಡಿದ್ರೂ ಅದರ ಮುಂದೆ ಕೋವಿಡ್ ಫ್ರೀ ಎಂದು ಸೇರಿಸೋ ಫ್ಯಾಷನ್ ಶುರು ಆಗುತ್ತೆ.**

ಈಗಾ ದೇವಸ್ಥಾನಗಳಲ್ಲಿ ಹೆಚ್ಚು ಭಕ್ತರಿಲ್ಲದೇ ಪೂಜಾರಿಗಳಿಗೆ ದಕ್ಷಿಣೆ ಕಡಿಮೆ ಆಗಿದೆಯಲ್ಲಾ ಅವರು ಏನು ಮಾಡ್ತಾರೆ?

**ಹೊಸ ಪೂಜಾ ಮತ್ತು ಹೋಮದ ಟ್ಯಾಕ್ಟಿಸ್. ಅದಕ್ಕೆ ಭರ್ಜರಿ ಫೀಸ್ ಚಾರ್ಜ್ ಮಾಡ್ತಾರೆ.**


ಯಾವ ರೀತಿಯ ಪೂಜೆ?

**ಕೊರೊನಾ ಸಂಕಟ ಹರ ಪೂಜೆ.**

ಮತ್ತೇ ಹೋಮ?

**ಕೋವಿಡ್ ಹೋಮ!!!**

## ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಕ್ಕೆ ನಿಂಗರಾಜ ಹಾವನೂರು ಭೇಟಿ



ದಾವಣಗೆರೆ, ಜು.4- ನಗರದ ರಾಜನಹಳ್ಳಿ ಸೀತಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ಶಾಲಾಭಿವೃದ್ಧಿ ಸಮಿತಿ ಸದಸ್ಯರೂ, ಕರ್ನಾಟಕ ರಾಜ್ಯ ಶಾಲಾಭಿವೃದ್ಧಿ ಸಮಿತಿ ಸಮನ್ವಯ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಿಂಗರಾಜ ಹಾವನೂರು ಅವರು ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಕಾಲೇಜಿನ ಉಪಪ್ರಾಚಾರ್ಯ ಮಂಜಪ್ಪ ಮತ್ತಿತರರಿದ್ದರು.

# ಪ್ರಬುದ್ಧ ಪ್ರತಿಭಟನೆಗೆ ಸಿಗಬೇಕಿದೆ ನ್ಯಾಯ...!



*ಈ ಕಿರಿಯ ವೈದ್ಯರಿಗೆ ಕೊಡಬೇಕಾದ ಶಿಷ್ಯ ವೇತನಕ್ಕೆ, ನ್ಯಾಯಕ್ಕೆ ಸರ್ಕಾರ ಮತ್ತು ಸಂಬಂಧಪಟ್ಟವರು ತೋರಿಸುತ್ತಿರುವ ಅಸಡ್ಡೆ ಪ್ರತಿಯೊಬ್ಬ ಪ್ರಗತಿಪರ ಪ್ರಜೆಗಳು ತಲೆ ತಗ್ಗಿಸುವ ನಾಚಿಕೆಗೇಡಿತನದ ವಿಷಯವಾಗಿದೆ ಎಂಬುದು ನಗರದ ಪ್ರಬುದ್ಧ ವೈದ್ಯರ, ಚಿಂತಕರ, ಸಾಮಾಜಿಕ ಸಂಘಟನೆಗಳ ಅಭಿಪ್ರಾಯ....*

ಈ ವಿದ್ಯಾರ್ಥಿಗಳು ಕಷ್ಟಪಟ್ಟು ಓದಿದ್ದಾರೆ. ತಮ್ಮ ವಿದ್ಯಾ ಪ್ರತಿಭೆಯಿಂದ ಸರ್ಕಾರಿ ವೈದ್ಯಕೀಯ ವ್ಯಾಸಂಗದ ಸ್ಥಾನವನ್ನು ಗಿಟ್ಟಿಸಿದ್ದಾರೆ. ಕಷ್ಟಪಟ್ಟು ಓದುತ್ತಾ ಈಗ ಸಹಾಯಕ ವೈದ್ಯರಾಗಿ ಚಿಗಟೇರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿಭಾಯಿಸಿದ್ದಾರೆ. ಈ ಕೋವಿಡ್ ಸಂದರ್ಭದಲ್ಲಿ ಹಗಲಿಗೆ ಹಗಲು ಕೊಟ್ಟು ಸೇವೆಯನ್ನೂ ಮಾಡುತ್ತಿದ್ದಾರೆ. ಇವರ ಸಹಕಾರವನ್ನು ಪಡೆದುಕೊಳ್ಳುತ್ತಿರುವ ಸರ್ಕಾರ ಅಥವಾ ಸಂಬಂಧಪಟ್ಟವರು ಸುಮಾರು ಒಂದೂವರೆ ವರ್ಷಗಳಿಂದ ಇವರಿಗೆ ಶಿಷ್ಯ ವೇತನವನ್ನು ಇಲ್ಲಿಯವರೆಗೂ ಕೊಟ್ಟಿಲ್ಲ! ಕೇಳಲು ಹೋದರೆ ಅವರ ಮೇಲೆ ಇವರು, ಇವರ ಮೇಲೆ ಅವರು ಜವಾಬ್ದಾರಿಯನ್ನು ಹೊರಿಸುತ್ತಿದ್ದಾರೆ. ಜಿಲ್ಲೆಯ ಅಧಿಕಾರಿಗಳು, ಜನಪ್ರತಿನಿಧಿಗಳು ಜಾಣ ಕುರುಡನ್ನು ಪ್ರದರ್ಶಿಸಿ, ಕಣ್ಣಾ ಮುಚ್ಚಾಲೆ ಆಡುತ್ತಿದ್ದಾರೆ. ಪಾಪ ಈ ವಿದ್ಯಾರ್ಥಿಗಳು ಸರ್ಕಾರ - ಕಾಲೇಜ್ ಮ್ಯಾನೇಜ್ ಮೆಂಟ್ ಜಗ್ಗಾಟದಲ್ಲಿ ನಜ್ಜು ಗುಜ್ಜಾಗಿದ್ದಾರೆ. ದಾವಣಗೆರೆಯ ಜೆ.ಜೆ.ಎಂ ವೈದ್ಯಕೀಯ ಸ್ನಾತಕೋತ್ತರ ಮತ್ತು ಗೃಹ ವೈದ್ಯಕೀಯ ವಿದ್ಯಾರ್ಥಿಗಳ ಈ ಸಂಕಟದ ಸ್ಥಿತಿ ಈಗ ದೇಶಾದ್ಯಂತ ಚರ್ಚೆಗೊಳಗಾಗುತ್ತಿದೆ. ಈ ನಿಟ್ಟಿನಲ್ಲಿ ನಮ್ಮ ಅಧ್ಯಯನ ತಂಡ ಹಲವರನ್ನು ಭೇಟಿ ಮಾಡಿ ಅಭಿಪ್ರಾಯಗಳನ್ನು ಸಂಗ್ರಹಿಸಿದೆ. ಕೆಲವು ಮುಖ್ಯ ಅಂಶಗಳನ್ನು ಸಾಂದ್ರೀಕರಿಸಿ ಓದುಗರ ಗಮನಕ್ಕೆ ತರುತ್ತಿದ್ದೇವೆ. ವಿಚಿತ್ರ ಸನ್ನಿವೇಶವೆಂದರೆ, ಅನಿಸಿಕೆಗಳನ್ನು ವ್ಯಕ್ತಪಡಿಸಿರುವ ಹಲವು ವೈದ್ಯರ, ಸಾಮಾಜಿಕ ಸಂಘಟನೆಗಳ ಮತ್ತು ಪ್ರಾಮಾಣಿಕ ಸರಕಾರಿ ಅಧಿಕಾರಿಗಳ ಹೆಸರುಗಳನ್ನೂ ಸಹ ನಾವು ಬಹಿರಂಗಗೊಳಿಸುವಂತಿಲ್ಲ! ಬಹಿರಂಗಪಡಿಸಿದರೆ ಸರ್ಕಾರದಿಂದ ಅಥವಾ ಅವರ ಮೇಲೆ ಅಧಿಕಾರ ಹೊಂದಿರುವ ವ್ಯಕ್ತಿಗಳಿಂದ ಆಗಬಹುದು ತೊಂದರೆ. ಇದು ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ಸದ್ಯದ ಸಂಕಟ.

ಎಲ್ಲಾ ಕಡೆಗಳಿಂದ ಬಂದಿರುವ ಮೆಚ್ಚುಗೆಯ ಮಾತುಗಳೆಂದರೆ, ಈ ವಿದ್ಯಾರ್ಥಿಗಳು ಇಲ್ಲಿಯವರೆಗೂ ತಮ್ಮ ಪ್ರತಿಭಟನೆಯಿಂದ ಯಾರಿಗೂ ತೊಂದರೆ ಕೊಟ್ಟಿಲ್ಲ, ಸಾರ್ವಜನಿಕ ಸೊತ್ತುಗಳಿಗೆ ಹಾನಿ ಮಾಡಿಲ್ಲ, ತಮ್ಮ ಕರ್ತವ್ಯವನ್ನೂ ಸಹ ಮಾಡುತ್ತಾ ಸಿಗಬೇಕಾದ ನ್ಯಾಯಕ್ಕೆ ಬೇಡಿಕೆ ಇಟ್ಟಿದ್ದಾರೆ. ತಮ್ಮ ಪ್ರತಿಭಟನೆಯನ್ನು ಶಾಂತ ರೀತಿಯಿಂದ ಮಾಡುತ್ತಿದ್ದಾರೆ. ಜೊತೆಗೆ ರಕ್ತದಾನ, ನೇತ್ರದಾನದಂತಹ ಅಮೂಲ್ಯ ಸೇವೆಯನ್ನೂ ಸಹ ಮಾಡುತ್ತಿದ್ದಾರೆ. ಕೋವಿಡ್ ವಾರಿಯರ್ಸ್ ಆಗಿ ಚೈನಾ ವಿರುದ್ಧ ತೊಡೆ ತಟ್ಟಿರುವ ನಮ್ಮ ಭಾರತ ಸೈನ್ಯದ ವಾರಿಯರ್ಸ್‌ಗೆ ಮನೋ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ. ಇಂತಹ ಪ್ರಬುದ್ಧತೆಯಿಂದ ಪ್ರತಿಭಟನೆ ಮಾಡುತ್ತಿರುವ ಈ ಕಿರಿಯ ವೈದ್ಯರ ಬಗ್ಗೆ ಸಾರ್ವಜನಿಕವಾಗಿ ಬೆಂಬಲ ವ್ಯಕ್ತವಾಗುತ್ತಿದೆ. ಇಲ್ಲಿಯವರೆಗೂ ಇವರನ್ನು ಭೇಟಿಯಾಗಿರುವ ಜನಪ್ರತಿನಿಧಿಗಳು, ಅಧಿಕಾರಿಗಳು ಇವರಿಗೆ ಮೌಖಿಕವಾಗಿ ಭರವಸೆ ನೀಡುತ್ತಿದ್ದಾರೆಯೇ ಹೊರತು ಲಿಖಿತ ಭರವಸೆ ನೀಡಲು ಹಿಂದೇಟು ಹಾಕುತ್ತಿದ್ದಾರೆ.

ಹಾಸ್ಯಾಸ್ಪದ ವಿಷಯವೆಂದರೆ ನ್ಯಾಯ ಕೇಳುತ್ತಿರುವ ಇವರಿಗೆ ಹೆದರಿಸುವ ಪ್ರಯತ್ನ ನಡೆದಿದೆ. ಅಧಿಕಾರಿಗಳು ಇವರ ಮೇಲೆ ಕ್ರಮ ಕೈಗೊಳ್ಳುವ ಸುತ್ತೋಲೆ ಹೊರಡಿಸಿದ್ದಾರೆ. ಇದೇ ಅಧಿಕಾರಿಗಳು ಸರ್ಕಾರಕ್ಕೆ ಈ ಕಿರಿಯ ವೈದ್ಯರಿಗೆ ನ್ಯಾಯ ಸಿಗಬೇಕಿದೆ ಎಂದು ಯಾಕೆ ಪತ್ರ ಬರೆಯಬಾರದು? ಎಂದು ಪ್ರಶ್ನಿಸುತ್ತಾರೆ ಆಸ್ಪತ್ರೆಯ ಆಯಾ.

ಅಲ್ಲಾ ಸ್ವಾಮಿ ನಮ್ಮಂತಹ ಹೆಚ್ಚು ಓದಿರದ ಹೆಣ್ಣುಮಗಳಿಗೆ ಇದು ಅರ್ಥ ಆಗುತ್ತೆ, ಇವರಿಗೆ ಆಗಕಿಲ್ವಾ? ಇದಕ್ಕೆ ಎದೆಗಾರಿಕೆ ಬೇಕು. ಶ್ರೀಮಂತರಿಗೆ, ಸಚಿವರಿಗೆ ಬರೀ ಸಲಾಂ ಹೊಡೆಯುವ ಇಂತಹವರಿಂದ ಈ ವಿದ್ಯಾರ್ಥಿಗಳಿಗೆ ನ್ಯಾಯ ಸಿಗ್ತದಾ? ಎಂದು ಪ್ರಶ್ನಿಸಿದಾಗ ನಮ್ಮ ತಂಡವೇ ತಬ್ಬಿಬ್ಬುಗೊಂಡಿತು.

ಇನ್ನೋರ್ವ ಹಿರಿಯರು ಹೇಳಿದ್ದು ಹೀಗೆ. ಈ ಕೊರೊನಾ ಸಂದರ್ಭದಲ್ಲಿ ನಮ್ಮ ಎಲ್ಲಾ ಮುಖಂಡರು, ಅಧಿಕಾರಿಗಳು ಬೂಟಾಟಿಕೆಗೆ ಈ ವೈದ್ಯರ ಮೇಲೆ ಹೂಮಳೆ ಸುರಿಸೋದು, ಕೊರೊನಾ ಮುಕ್ತರ ಜೊತೆಗೆ ಫೋಟೋ ತೆಗೆಸಿಕೊಂಡು ತಾವೇ ಘನಂಧಾರಿ ಕೆಲಸ ಮಾಡಿರೋದು ಅಂತಾ ಮಾಧ್ಯಮದಲ್ಲಿ ಮಿಂಚೋದನ್ನಷ್ಟೇ ಮಾಡ್ತಾ ಇದಾರೆ. ಇವರೆಲ್ಲಾ ಕೇವಲ ಫೋಟೋ ವೀರರು. ನಿಜವಾದ ಕೊರೊನಾ ಯೋಧರನ್ನು ಮರೆ ಮಾಚುತ್ತಿದ್ದಾರೆ. ಈ ಕಿರಿಯ ವೈದ್ಯರಿಗೆ ಕೊಡಬೇಕಾದ ಶಿಷ್ಯ ವೇತನಕ್ಕೆ, ನ್ಯಾಯಕ್ಕೆ ಸರ್ಕಾರ ಮತ್ತು ಸಂಬಂಧಪಟ್ಟವರು ತೋರಿಸುತ್ತಿರುವ ಅಸಡ್ಡೆ ಪ್ರತಿಯೊಬ್ಬ ಪ್ರಗತಿಪರ ಪ್ರಜೆಗಳು ತಲೆ ತಗ್ಗಿಸುವ ನಾಚಿಕೆಗೇಡಿತನದ ವಿಷಯವಾಗಿದೆ ಎಂಬುದು ನಗರದ ಪ್ರಬುದ್ಧ ವೈದ್ಯರ, ಚಿಂತಕರ, ಸಾಮಾಜಿಕ ಸಂಘಟನೆಗಳ ಒಟ್ಟು ಅಭಿಪ್ರಾಯವಾಗಿದೆ.

ಸರ್ಕಾರ ಮತ್ತು ಜನಪ್ರತಿನಿಧಿಗಳು ನ್ಯಾಯ ಕೇಳುತ್ತಿರುವವರ ಸಂಖ್ಯೆ ಕೇವಲ ನೂರಾಇಪ್ಪತು ಎಂದು ಹಗುರವಾಗಿ ಪರಿಗಣಿಸಿದೆ. ಬಹುತೇಕ ಎಲ್ಲಾ ವೃತ್ತಿಪರರು, ಚಿಂತಕರು, ವೈದ್ಯರು, ಇಂಜಿನಿಯರ್‌ಗಳು, ಪ್ರಗತಿಪರ ಸಾಮಾಜಿಕ ಸಂಘಟನೆಗಳು ಈ ನ್ಯಾಯಯುತ ಹೋರಾಟಕ್ಕೆ ಸಹಾನುಭೂತಿ ತೋರಿಸುತ್ತಿರುವುದನ್ನು ನೋಡಿದರೆ, ಇವರಿಗೆ 120 x 120 ಬೆಂಬಲ ಸಿಗುವ ಮುನ್ಸೂಚನೆ ಕಂಡು ಬರುತ್ತಿದೆ! ಪರಿಸ್ಥಿತಿ ಕ್ಲಿಷ್ಟಕರವಾಗುವ ಮುನ್ನ ಸಂಬಂಧಪಟ್ಟವರು ಕ್ರಮ ಕೈಗೊಳ್ಳಬೇಕಾಗಿದೆ. ಈಗ ಬೇಕಾಗಿರುವುದು ಕಾನೂನು ಕ್ರಮವಲ್ಲ, ಮಾನವೀಯ ಕ್ರಮ. ಈ ವೈದ್ಯರಿಗೆ ನ್ಯಾಯ ಸಿಗಬೇಕಿದೆ.

## ವೇದವ್ಯಾಸ ಗುರು ಸ್ಮರಣೆ

ಗುರು, ಮಹಾಗುರು, ಸದ್ಗುರು, ಜಗದ್ಗುರು
ಮನುಕುಲಕೇ ಬೆಳಕಿತ್ತ ಮಹಾಮಹಿಮರು
ವೇದಗಳ ವಿಭಜಿಸಿ ಭಜಿಸಿದ ಜ್ಞಾನ ಸಿಂಧು
ಅರಿವನೊಲುಮೆಯ ಮೇರು,ಕಾರುಣ್ಯ ಬಂಧು
ಆದಿ ಗುರು,ಅನಾದಿ ಬೇರು; ವ್ಯಾಸರಿಗೆ-ನಮನ

ವಿಸ್ತೃತ ವಿಕಾಸದ ಮೆಟ್ಟಿಲುಗಳೊಂದಿಗೆ
ಜ್ಞಾನಾನುಸಂಧಾನ,ಬ್ರಹ್ಮಸೂತ್ರಕೆ ದೀಕ್ಷೆಯಿತ್ತು
ಪುರಾಣೇತಿಹಾಸದ ಕಾವ್ಯಾಮೃತದ ತುತ್ತನಿತ್ತು
ರಸವತ್ತಾಗಿ,ರುಚಿಕಟ್ಟಾಗಿ ಉಣಿಸಿದ ಸಾಕಾರ
-ಮೂರ್ತಿ ವೇದ ವ್ಯಾಸರಿಗೆ- ನನ್ನ ನಮನ ।

ರಾಶಿರಾಶಿ ಜ್ಞಾನಾನುಭವವ ಮುಗಿಲೆತ್ತರ
ನಿಲ್ಲಿಸಿ ಗೆಲ್ಲಿಸಿದ ಪ್ರತಿಭಾ ಶಿರೋಮಣಿ
ಸಾಗರದಾಳದ ತಿಳಿವಿನ ತಿಳಿಯನು
ಕಥಾ ಹಂದರದಿ ವಿಶದಗೊಳಿಸಿ ಉದಾಹರಿಸಿದ
ಪರಮ ಗುರು ವೇದವ್ಯಾಸರಿಗೆ- ನನ್ನ ನಮನ ।

ಕರುಣಾಮೂರ್ತಿ,ಮಾತೃ-ಪ್ರೇಮ ಸ್ವರೂಪಿ
ವಿಷ್ಣುರೂಪಿ,ಅರಿವಿನ ಯಜ್ಞದ ರೂವಾರಿ
ಹದಿನೆಂಟು ಮಹಾಪುರಾಣ, ಉಪ ಪುರಾಣ,
ಸರ್ವರೂ ಒಪ್ಪುವ "ಮಹಾಭಾರತ" ದ ಕರ್ತೃ
ಆರ್ಯಾವರ್ತದಾರ್ಯ; ಗುರು ವ್ಯಾಸರಿಗೆ-ನನ್ನ ನಮನ ।

ಪಂಡಿತ ಪಾಮರರಾದಿ ಮನುಜರೆಲ್ಲರ
ಬುದ್ದಿ-ಭಾವಕೆ ಶುದ್ಧಿ,ಸಿದ್ದಿಯ ಸೋಕಿಸಿ
ದುರ್ಬುದ್ದಿಗಳ ನಿವಾಳಿಸಿ, ಶೋಕ ನಿವಾರಿಸಿದ,
ಸನಾತನಕೆ ವಿನೂತನದುಡಿಗೆ ತೊಡಿಸಿದ ಮಾನವತಾವಾದಿ
ವ್ಯಾಸರಿಗೆ-ನನ್ನ ನಮನ

ಆಷಾಢ ಮಾಸದ ಹುಣ್ಣಿಮೆಯಲವತರಿಸಿ
ಆಷಾಢಭೂತಿಗಳ ಅಂಧಾಕ್ಷಿಯ ಪೊರೆ ಸರಿಸಿ
ಭಗವದ್ಗೀತೆಯ ಸಾರವ ಸಮನ್ವಯಗೊಳಿಸಿ
ಜ್ಞಾನಾಭಿದಾನದಿ 'ಗುರೂಣಾಂ ಗುರುವೇ' ಆದ
ಕೃಷ್ಣದ್ವೈಪಾಯನ 'ವ್ಯಾಸ' ಮಹರ್ಷಿಗೆ-ನನ್ನ ನಮನ ।

**- ಮಹಾಂತೇಶ್ ಬಿ.ನಿಟ್ಟೂರ್**

# ಕೊರೊನಾ : ಶ್ವೇತಪತ್ರಕ್ಕೆ ಸರ್ಕಾರ ಸಿದ್ಧ

**(5ನೇ ಪುಟದಿಂದ)** ತಡೆಗಾಗಿ ಕರ್ನಾಟಕ ತೆಗೆದುಕೊಂಡ ಕ್ರಮಕ್ಕೆ ಕೇಂದ್ರ ಸರ್ಕಾರ ಮೆಚ್ಚುಗೆ ವ್ಯಕ್ತಪಡಿಸಿದೆ. ಭಾರತದಲ್ಲಿ ಕೊರೊನಾ ನಿಯಂತ್ರಿಸಿದ ರೀತಿಗಾಗಿ ಇಡೀ ವಿಶ್ವವೇ ಭಾರತವನ್ನು ಮೆಚ್ಚಿದೆ ಎಂದವರು ಸಮರ್ಥಿಸಿಕೊಂಡರು.

**ಟೆಸ್ಟ್‌ನಲ್ಲಿ ಮೂರನೇ ಸ್ಥಾನ :** ಕೊರೊನಾ ಪರೀಕ್ಷೆ ನಡೆಸುವಲ್ಲಿ ಕರ್ನಾಟಕ ಈಗ ಭಾರತದಲ್ಲಿ ಮೂರನೇ ಸ್ಥಾನದಲ್ಲಿದೆ ಎಂದು ಸಚಿವ ಶ್ರೀರಾಮುಲು ಹೇಳಿದ್ದಾರೆ.

ಪರೀಕ್ಷೆಯ ಸಂಖ್ಯೆ ಹೆಚ್ಚಿಸಲಾಗುತ್ತಿದೆ. ಇದರ ಜೊತೆಗೆ ಚಿಕಿತ್ಸೆಗೂ ಹೆಚ್ಚಿನ ಕ್ರಮ ತೆಗೆದುಕೊಳ್ಳಾಗುತ್ತಿದೆ ಎಂದವರು ಹೇಳಿದ್ದಾರೆ

**ಸಚಿವರೆಲ್ಲ ಫ್ರೆಂಡ್ಸ್ :** ಕೊರೊನಾ ವಿರುದ್ಧದ ಹೋರಾಟದಲ್ಲಿ ಸಚಿವರ ನಡುವೆ ಸಮನ್ವಯತೆ ಇಲ್ಲ ಎಂಬ ಕಾಂಗ್ರೆಸ್ ಆರೋಪವನ್ನು ತಳ್ಳಿ ಹಾಕಿರುವ ಶ್ರೀರಾಮುಲು, ನಾವು ಸಚಿವರೆಲ್ಲ 'ಫ್ರೆಂಡ್ಸ್'. ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿ ನೇತೃತ್ವದಲ್ಲಿ ನಾವೆಲ್ಲರೂ ಕಾರ್ಯ ನಿರ್ವಹಿಸುತ್ತಿದ್ದೇವೆ ಎಂದಿದ್ದಾರೆ.

**ಸರ್ಕಾರಿ ಆಸ್ಪತ್ರೆಯ ರೆಫರೆನ್ಸ್ ಪಡೆಯಿರಿ :** ಕೊರೊನಾ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಾಗುವುದಕ್ಕೆ ಮುಂಚೆ ಸರ್ಕಾರಿ ಆಸ್ಪತ್ರೆಯ ರೆಫರೆನ್ಸ್ ಪಡೆಯುವಂತೆ ಆರೋಗ್ಯ ಸಚಿವ ಬಿ. ಶ್ರೀರಾಮುಲು ಸಲಹೆ ನೀಡಿದ್ದಾರೆ. ಖಾಸಗಿ ಆಸ್ಪತ್ರೆಗೆ ಹೋದಾಗ ಪ್ರವೇಶ ನಿರಾಕರಿಸುವ ಸಾಧ್ಯತೆ ಇರುತ್ತದೆ. ಅದೇ ಸರ್ಕಾರಿ ಆಸ್ಪತ್ರೆಯ ರೆಫರೆನ್ಸ್ ಪಡೆದ ನಂತರ ಖಾಸಗಿ ಆಸ್ಪತ್ರೆಗಳು ಚಿಕಿತ್ಸೆ ನಿರಾಕರಿಸಲಾಗದು ಎಂದವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಎಸ್.ಎ. ರವೀಂದ್ರನಾಥ್, ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಪ್ರೊ. ಲಿಂಗಣ್ಣ, ಮಾಡಾಳ್ ವಿರೂಪಾಕ್ಷಪ್ಪ, ಮೇಯರ್ ಅಜಯ್ ಕುಮಾರ್, ಜಿ.ಪಂ. ಅಧ್ಯಕ್ಷೆ ದೀಪಾ ಜಗದೀಶ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಪರಿಶಿಷ್ಟ ಪಂಗಡ ಮೀಸಲಾತಿ ಹೆಚ್ಚಳದ ನಿರ್ಧಾರ

ಪರಿಶಿಷ್ಟ ಪಂಗಡ ಮೀಸಲಾತಿಯನ್ನು ಹೆಚ್ಚಿಸಲು ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗ ವರದಿ ನೀಡಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಆರೋಗ್ಯ ಸಚಿವ ಶ್ರೀರಾಮುಲು, ಕೊರೊನಾ ಮುಗಿದ ನಂತರ ಸರ್ಕಾರ ನಿರ್ಧಾರ ತಗೆದುಕೊಳ್ಳಲಿದೆ ಎಂದಿದ್ದಾರೆ. ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ಹೆಚ್ಚಿಸುವ ಕುರಿತು ಆಯೋಗ ಮಹತ್ವದ ವರದಿ ನೀಡಿದೆ. ಮೀಸಲಾತಿ ಹೆಚ್ಚಿಸದೇ ಇದ್ದರೆ ರಾಜೀನಾಮೆ ನೀಡುವುದಾಗಿಯೂ ಶ್ರೀರಾಮುಲು ಈ ಹಿಂದೆ ಹೇಳಿಕೆ ನೀಡಿದ್ದರು.

## ಅನ್ಯ ರಾಜ್ಯಗಳಿಂದ ಬಂದವರಿಂದ ಕೊರೊನಾ ಉಲ್ಬಣ : ಭೈರತಿ ಬಸವರಾಜ್

ದಾವಣಗೆರೆ, ಜು. 4 - ಅನ್ಯ ರಾಜ್ಯಗಳಿಂದ ಬಂದವರಿಂದ ರಾಜ್ಯದಲ್ಲಿ ಕೊರೊನಾ ಉಲ್ಬಣಿಸುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಲಾಕ್‌ಡೌನ್ ಸಡಿಲಿಕೆಯ ನಂತರ ಮಹಾರಾಷ್ಟ್ರ, ತಮಿಳುನಾಡು ಹಾಗೂ ಗುಜರಾತ್ ಸೇರಿದಂತೆ ಹೊರ ರಾಜ್ಯಗಳಿಂದ ಜನರು ಇಲ್ಲಿಗೆ ಬಂದಿದ್ದಾರೆ. ಇದತರಿಂದಾಗಿ ಕೊರೊನಾ ಪ್ರಕರಣಗಳು ಹೆಚ್ಚಾಗಿವೆ ಎಂದವರು ತಿಳಿಸಿದ್ದಾರೆ.

ಈ ಸಮಸ್ಯೆಯನ್ನು ಎದುರಿಸುವ ಸಾಮರ್ಥ್ಯ ಇದೆ. ಈ ಬಗ್ಗೆ ನಿನ್ನೆ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ಕರೆದು ಚರ್ಚಿಸಲಾಗಿದೆ ಎಂದವರು ಹೇಳಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ ಈಗ ಸುಮಾರು 45 ಸಕ್ರಿಯ ಕೊರೊನಾ ಪ್ರಕರಣಗಳಿವೆ. ಕೊರೊನಾ ತಡೆಗಟ್ಟಲು ವೈದ್ಯಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳಿಗೆ ತಿಳಿಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

## ವೈದ್ಯಕೀಯ ವಿದ್ಯಾರ್ಥಿ ಶಿಷ್ಯವೇತನಕ್ಕೆ ಎಸ್ಸೆಸ್ ಸಮ್ಮತಿ

ಜೆ.ಜೆ.ಎಂ.ಸಿ. ನಿವಾಸಿ ವೈದ್ಯಕೀಯ ವಿದ್ಯಾರ್ಥಿಗಳ 16 ತಿಂಗಳ ಬಾಕಿ ಶಿಷ್ಯವೇತನವನ್ನು ಪಾಲಿಸಲು ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಯೂ ಆಗಿರುವ ಶಾಸಕ ಶಾಮನೂರು ಶಿವಶಂಕರಪ್ಪ ಒಪ್ಪಿಕೊಂಡಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ನಿನ್ನೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಜೊತೆ ನಡೆಸಲಾದ ಸಭೆಯಲ್ಲಿ ಈ ಬಗ್ಗೆ ಅವರು ಸಮ್ಮತಿಸಿದ್ದಾರೆ ಎಂದು ಹೇಳಿದರು.

ಸೋಮವಾರದಿಂದ ಶಿಷ್ಯ ವೇತನ ನೀಡುವುದಾಗಿ ಅವರು ಹೇಳಿದ್ದಾರೆ ಎಂದ ಬಸವರಾಜ್, ಇಡೀ ರಾಜ್ಯಕ್ಕೆ ಒಂದೇ ರೀತಿಯ ನೀತಿ ಇರಬೇಕು. ಹೀಗಾಗಿ ಶಿಷ್ಯ ವೇತನವನ್ನು ಕಾಲೇಜುಗಳೇ ಪಾವತಿಸಬೇಕು ಎಂದರು.








# ನಾ ಕಂಡ ಜಿ.ಎಂ. ಸಿದ್ದೇಶ್ವರ



ದಾವಣಗೆರೆಯ ಜಿಲ್ಲೆಯ ಎಂ.ಪಿ. ಜಿ.ಎಂ. ಸಿದ್ದೇಶ್ವರ ಅವರನ್ನು ನಾ ಚಿಕ್ಕ ವಯಸ್ಸಿನಿಂದ ನೋಡಿಕೊಂಡು ಬೆಳೆದವನು. ಆಗಿನಿಂದ ಈಗಿನ ತನಕ ಅವರು ನನ್ನ ಕಣ್ಣಿಗೆ 'ಸಿಂಪಲ್ ಮ್ಯಾನ್' ತರಹನೇ ಕಂಡಿದ್ದಾರೆ, ಆಧಿಕಾರ ಇದೆ ಎನ್ನುವ ಅಹಂಕಾರ ಇವರಲ್ಲಿ ಎಂದಿಗೂ ನಾ ಕಾಣಲಿಲ್ಲ. ಏಕೆಂದರೆ ಅವರಿಗೆ ಗೊತ್ತಿರುವುದು ಒಂದೇ ಒಂದು, ಅದು ಪ್ರೀತಿ ಮಾತ್ರ.

ಯಾರೇ ಬರಲಿ ಇಲ್ಲ ಎಂದು ಹೇಳಿದವರು ಅಲ್ಲ. ಅವರ ಆಫೀಸ್ ಗೆ ಯಾರಾದರು ಏನಾದರೂ ಕೆಲಸ ಆಗಬೇಕು ಎಂದು ಬಂದು ಕಾಯುತ್ತಾ ಇದ್ದರೇ ಇವರೇ ಅವರ ಬಳಿ ಹೋಗಿ ಅವರ ಸಮಸ್ಯೆ ಕೇಳುತ್ತಾರೆ, ಎಂತಹ ಸಮಸ್ಯೆ ಆದರೂ ಆಗಲ್ಲ ಎನ್ನುವ ವ್ಯಕ್ತಿ ಅಲ್ಲ. ಒಂದು ಲೆಟರ್ ಕೊಟ್ಟು ಹೋದರೆ ಸಾಕು, ಡೆಲ್ಲಿಯ ತನಕ ಆದರೂ ಹೋಗಿ ಆ ಕೆಲಸ ಮಾಡಿ ಕೊಡುವ ಜನ ನಾಯಕ.

ಅವರದ್ದೇ ಆದ ಪ್ರತಿಜ್ಞೆಗಳು ಇವೆ, ಸಿದ್ಧಾಂತಗಳು ಇವೆ, ಒಳ್ಳೆಯದಕ್ಕೆ ಎಂದಿಗೂ ಜಾತಿ-ಧರ್ಮ ನೋಡುವ ವ್ಯಕ್ತಿ ಅಲ್ಲ, ಅಹಂಕಾರವೇ ಇಲ್ಲದೇ ಇರುವಂತಹ ನಾ ಕಂಡ ಹೃದಯವಂತ, ಯಾರನ್ನೂ ಮೆಚ್ಚಿಸಲು ನಾ ಹೇಳುತ್ತಿಲ್ಲ ಇದು ನನ್ನ ಮನದ ಮಾತು, ನಾ ಕಂಡ ಸಿದ್ದೇಶ್ವರ ಅವರು ಇರುವುದೇ ಹೀಗೆ.

ನಾ ಇನ್ನೂ ಯುವ ರಾಜಕಾರಣಿ, ನನ್ನಂತ ಯುವಕರಿಗೆ ಯಾವ ರೀತಿ ಬೆಂಬಲ ನೀಡಿ, ಉತ್ಸಾಹ ತುಂಬುವ ಕೆಲಸ ಮಾಡುತ್ತಾರೆ ಎಂದರೆ ನಿಜಕ್ಕೂ ಖುಷಿ ಆಗುತ್ತದೆ, ಇದು ಕೇವಲ ನನ್ನ ವಿಷಯದಲ್ಲಿ ಅಲ್ಲ ಸಣ್ಣ ಕಾರ್ಯಕರ್ತನಿಗೂ ಗೌರವ ಕೊಟ್ಟು, ಪ್ರೀತಿಯಿಂದ ಮಾತನಾಡಿಸುವ ಹಸನ್ಮುಖಿ ಇವರು.

ದಾವಣಗೆರೆ ಜಿಲ್ಲೆಗೆ ಇವರ ಕೊಡುಗೆ ಅಪಾರ, ಮಾಡಿದ ಕೆಲಸವನ್ನು ಶೋ ಕೊಡುವ ಗುಣ ಇವರಲ್ಲಿ ಇಲ್ಲ, ನಾನು ಏನು ಮಾತನಾಡುವುದಿಲ್ಲ, ನನ್ನ ಕೆಲಸ ಮಾತನಾಡಬೇಕು ಎನ್ನುವ ಲೀಡರ್.

ನನ್ನ ಜಿಲ್ಲೆ ಯಾವ ಜಿಲ್ಲೆಗಿಂತ ಕಡಿಮೆ ಇರಬಾರದು. ಅಭಿವೃದ್ದಿಯಲ್ಲಿ ಒಂದು ಕೈ ಮೇಲೆ ಇರಬೇಕು ಎಂದು ಛಲ ತೊಟ್ಟ ಹಠವಾದಿ ಇವರು ಎನ್ನಬಹುದು, ಇವರಲ್ಲಿ ನಾವು ಎಂದಿಗೂ ರಾಜಕಾರಣಿಯನ್ನು ಕಾಣಲು ಸಾಧ್ಯವಿಲ್ಲ. ಇವರು ನಮ್ಮಂತೆ ಸಾಮಾನ್ಯರು ಜನರ ನಡುವೆ ಬದುಕುವ ಜನ ಸೇವಕ ಅಷ್ಟೇ.

ಇವರು ನವ ಯುವಕರನ್ನು ಯಾವ ರೀತಿ ಬೆಂಬಲ ಮಾಡುತ್ತಾರೆ ಎಂದು ಹೇಳುವುದೇ ಬೇಡ. ಅದಕ್ಕೆ ಉತ್ತಮವಾದ ಉದಾಹರಣೆಗೆ ಎಂದರೆ.....! ಈ ಬಾರಿ ಮಹಾನಗರ ಪಾಲಿಕೆಯಲ್ಲಿ ಇರುವ ಬಿ.ಜೆ.ಪಿ.ಯ ಯುವ ಕಾರ್ಪೊರೇಟರ್‌ಗಳೇ ಸಾಕ್ಷಿ, ನಿಮ್ಮ ಬಗ್ಗೆ ಹೇಳುತ್ತಾ ಹೋದರೆ ತುಂಬಾ ಇದೆ.

ಮೊದಲ ಬಾರಿ ಮಹಾನಗರ ಪಾಲಿಕೆಯ ಸದಸ್ಯನಾಗಿ ಗೆದ್ದು ಬಂದ ನನ್ನನ್ನು ಕರೆದು ತನ್ನ ಮಗನಂತೆ ಪ್ರೀತಿಯಿಂದ ಮಾತನಾಡಿಸಿ, ಪಕ್ಷದಲ್ಲಿ ದುಡಿಯಲು ಅವಕಾಶ ಕೊಟ್ಟಿದ್ದೀರಾ, ನಾ ಎಂದಿಗೂ ನಿಮಗೆ ಚಿರ ಋಣಿ ನೀವು ಕೊಟ್ಟ ಸ್ಥಾನಕ್ಕೆ ಪ್ರಾಮಾಣಿಕವಾಗಿ ನಿಷ್ಠೆಯಿಂದ, ಸೇವೆ ಮಾಡಿ ನಿಮ್ಮ ಹೆಸರನ್ನು ಉಳಿಸಿ, ಬೆಳೆಸುವ ಕೆಲಸ ಮಾಡುತ್ತೇನೆ, ಧನ್ಯವಾದಗಳು ಸರ್

ಇದೇ ರೀತಿ ಸೋಲನ್ನು ಕಾಣದೆ ನಿಮ್ಮ ಶ್ರದ್ಧೆಯ ಕೆಲಸವನ್ನು ಮುಂದುವರೆಸಿ.
ನಿಮ್ಮ ಜೊತೆಗೆ ಇಡೀ ಕ್ಷೇತ್ರದ ಜನ ಇದ್ದಾರೆ.

ಶುಭವಾಗಲಿ, ಶುಭವಷ್ಟೇ ಆಗಲಿ,


**ಜನ್ಮ ದಿನದ ಶುಭಾಶಯಗಳು ನನ್ನ ರಾಜಕೀಯ ಗುರುಗಳಿಗೆ**

ನೂರಾರು ಕಾಲ ನಗುತ್ತಾ ನವ ಯುವಕನಂತೆ ಬಾಳಿ, ನಿಮ್ಮ ನಡೆ ಎಲ್ಲರಿಗೂ ಸ್ಫೂರ್ತಿಯಾಗಲಿ.



**ಇಂತಿ ನಿಮ್ಮ ದಾವಣಗೆರೆ 19ನೇ ವಾರ್ಡ್‌ನ**
**ಮಹಾನಗರ ಪಾಲಿಕೆ ಸದಸ್ಯ ನಿಮ್ಮ ಅಭಿಮಾನಿ**

## ಶಿವಪ್ರಕಾಶ್ ಆರ್.ಎಲ್.


ಶ್ರೀಯುತರಿಗೆ ಜನ್ಮದಿನದ ಶುಭಕಾಮನೆಗಳು
ಹಿರಿಯ ಚೇತನ, ಸೋಲಿಲ್ಲದ ಸರದಾರ, ಅಭಿವೃದ್ಧಿಯ ಹರಿಕಾರ, ಕೇಂದ್ರದ ಮಾಜಿ ಸಚಿವರು, ದಾವಣಗೆರೆ ಲೋಕಸಭಾ ಕ್ಷೇತ್ರದ ಜನಪ್ರಿಯ ಸಂಸದರಾದ
ಶ್ರೀ ಜಿ.ಎಂ. ಸಿದ್ದೇಶ್ವರ ಅಣ್ಣಾಜೀ ಅವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು
ಭಗವಂತನು ಶ್ರೀಯುತರಿಗೆ ಆರೋಗ್ಯ, ಐಶ್ವರ್ಯ, ನೆಮ್ಮದಿಯನ್ನು ಕರುಣಿಸಲಿ ಎಂದು ಶುಭ ಹಾರೈಸುವ.
ಶ್ರೀ ಮುರುಗೇಶ ಆರ್. ನಿರಾಣಿ
ಶಾಸಕರು ಹಾಗೂ ಮಾಜಿ ಸಚಿವರು,
ಬೀಳಗಿ ವಿಧಾನಸಭಾ ಕ್ಷೇತ್ರ.
Tirumala Agency 6362988875


ಹುಟ್ಟುಹಬ್ಬದ ಶುಭಾಶಯಗಳು
ಇಂದು ತಮ್ಮ ಜನ್ಮ ದಿನದ ಸಂಭ್ರಮದಲ್ಲಿರುವ
ದಾವಣಗೆರೆ ಮಹಾನಗರ ಪಾಲಿಕೆ ಮಹಾಪೌರರಾದ
ಶ್ರೀ ಬಿ.ಜಿ. ಅಜಯ್ ಕುಮಾರ್
ಅವರಿಗೆ ಜನ್ಮದಿನದ ಶುಭಾಶಯಗಳು.
ಭಗವಂತನು ಅವರಿಗೆ ಆಯುರಾರೋಗ್ಯಭಾಗ್ಯ ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.
ಶುಭ ಕೋರುವವರು :
ಗುಡ್‌ಫುಡ್ ರೆಸ್ಟೋರೆಂಟ್


ಜನ್ಮ ದಿನದ ಶುಭಾಶಯಗಳು...
ಇಂದು ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಸತತ ದಾಖಲೆಯ
ನಾಲ್ಕನೇ ಬಾರಿಗೆ ಸಂಸದರಾಗಿ ಆಯ್ಕೆಯಾಗಿರುವ ನಮ್ಮ ನೆಚ್ಚಿನ ನಾಯಕರು,
ಅಭಿವೃದ್ಧಿ ಹರಿಕಾರರು, ನೇರ ನಡೆ-ನುಡಿಯ
ಧೀಮಂತ ನಾಯಕರು "ಸ್ಮಾರ್ಟ್ ಸಿಟಿ" ರೂವಾರಿಗಳು,
ಕೇಂದ್ರ ಸರ್ಕಾರದ ಮಾಜಿ ಸಚಿವರು, ಜನಪ್ರಿಯ ಸಂಸದರೂ ಆದ
ಸನ್ಮಾನ್ಯ ಶ್ರೀ ಜಿ.ಎಂ. ಸಿದ್ದೇಶ್ವರ್
ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳನ್ನು ಕೋರುತ್ತಾ ಭಗವಂತನು ಅವರಿಗೆ
ಆಯುರಾರೋಗ್ಯಭಾಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.
ಹಾಗೂ ದಾವಣಗೆರೆ ಮಹಾನಗರ ಪಾಲಿಕೆ ಮಹಾ ಪೌರರಾದ
ಸನ್ಮಾನ್ಯ ಶ್ರೀ ಬಿ.ಜಿ. ಅಜಯ್‌ಕುಮಾರ್
ಇವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು...
ಶುಭ ಕೋರುವವರು : ಎಸ್.ವಿ.ಆರ್. ಅಭಿಮಾನಿ ಬಳಗ
ಜಗಳೂರು ವಿಧಾನಸಭಾ ಕ್ಷೇತ್ರ
ಬಿಜೆಪಿ ಪದಾಧಿಕಾರಿಗಳು, ಅಭಿಮಾನಿಗಳು
ಹಾಗೂ ಕಾರ್ಯಕರ್ತರು


ಸೋಲಿಲ್ಲದ ಸರದಾರ ಮಾನ್ಯ ದಾವಣಗೆರೆ ಸಂಸದರಾದ ಶ್ರೀ ಜಿ.ಎಂ.ಸಿದ್ದೇಶ್ವರರವರಿಗೆ
ಹಾಗೂ ದಾವಣಗೆರೆ ಮಹಾನಗರ ಪಾಲಿಕೆಯ ಮಹಾಪೌರರಾದ ನಮ್ಮನಾಯಕ ನಮ್ಮೂರ ಜನ ನಾಯಕ
ಶ್ರೀ ಬಿ.ಜಿ. ಅಜಯ್ ಕುಮಾರ್ ಇವರಿಗೆ
ಜನ್ಮದಿನದ
ಶುಭಾಶಯಗಳು
ಶುಭ ಕೋರುವವರು : ಪೂಜ್ಯ ಮಹಾಪೌರರು, ಉಪಮಹಾಪೌರರು ಹಾಗೂ
ದಾವಣಗೆರೆ ಮಹಾನಗರಪಾಲಿಕೆ ಸದಸ್ಯರು ಮತ್ತು ಬಿ.ಜೆ.ಪಿ. ಮುಖಂಡರು

# ವೈದ್ಯ ವಿದ್ಯಾರ್ಥಿಗಳ ವೇತನ ಇತ್ಯರ್ಥ



**(5ನೇ ಪುಟದಿಂದ)** ದಿನವಾದ ಇಂದು ಪ್ರತಿಭಟನಾ ಸ್ಥಳಕ್ಕಾಗಮಿಸಿದ ಸಚಿವರು, ನಿನ್ನೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದಲ್ಲಿ ಸಭೆ ನಡೆದಿದೆ. ಈ ವಿಚಾರವಾಗಿ ತಾವೂ ಸಹ ಸೋಮವಾರ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಅವರೊಂದಿಗೆ ಮಾತನಾಡುವುದಾಗಿ ಭರವಸೆ ನೀಡಿದರು. ಅಲ್ಲದೇ ಮುಷ್ಕರ ಕೈ ಬಿಡುವಂತೆಯೂ ಮನವಿ ಮಾಡಿದರು.

ಆಗ ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಮಾತನಾಡಿ, ಕಳೆದ 16 ತಿಂಗಳಿನಿಂದ ನಮ್ಮ ಸಮಸ್ಯೆ ಬಗೆಹರಿಸಿಲ್ಲ. ಒಂದೇ ದಿನದಲ್ಲಿ ಬಗೆಹರಿಸಲಾಗುವುದೇ ? ಎಂದು ಪ್ರಶ್ನಿಸಿದರು. ಅದಕ್ಕೆ ಸಚಿವರು ಉತ್ತರಿಸಿ, ಸೋಮವಾರ ಸಭೆ ನಡೆಸಲಾಗುವುದು. ನಂತರ ನೀವುಗಳು ಯಾವುದೇ ನಿರ್ಧಾರ ಕೈಗೊಳ್ಳಬಹುದು ಎಂದು ಹೇಳುವ ಮೂಲಕ ವಿದ್ಯಾರ್ಥಿಗಳ ಮನವೊಲಿಸಿದರು.

ನಾಡಿದ್ದು ಸೋಮವಾರ ನಡೆಯಲಿರುವ ಸಭೆಯಲ್ಲಿ ವಿದ್ಯಾರ್ಥಿಗಳಿಂದ ಇಬ್ಬರು ಪ್ರತಿನಿಧಿಗಳನ್ನು ಭಾಗವಹಿಸಲು ಅವಕಾಶ ನೀಡಬೇಕು ಎಂದು ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಬೇಡಿಕೆ ಇಟ್ಟಿದ್ದಾರೆ.

ವಿಧಾನ ಪರಿಷತ್‌ನ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿ ಸ್ವಾಮಿ ಮಧ್ಯೆ ಪ್ರವೇಶಿಸಿ, ಈ ವಿಚಾರವಾಗಿ ಜಿಲ್ಲಾ ಸಚಿವರು ಸೋಮವಾರ ಸಂಬಂಧಪಟ್ಟವರೊಂದಿಗೆ ಮಾತನಾಡುತ್ತಾರೆ. ಅಲ್ಲಿಯವರೆಗೆ ಪ್ರತಿಭಟನೆ ನಿಲ್ಲಿಸುವಂತೆ ಹೇಳಿದರು.

ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೇರಿದಂತೆ ಇತರರು ಇದ್ದರು.

**ಸರ್ಕಾರದ ಮುಖೇನ ಸಿಗಲಿ:** ಸೋಮವಾರದಂದು ಶಿಷ್ಯ ವೇತನದ ಸಮಸ್ಯೆ ಬಗೆಹರಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವರ ಭರವಸೆ ಹಿನ್ನೆಲೆಯಲ್ಲಿ ಅನಿರ್ದಿಷ್ಟಾವಧಿ ಮುಷ್ಕರವನ್ನು ಭಾನು ವಾರ ಕೈ ಬಿಡಲಿದ್ದು, ಇತ್ಯರ್ಥವಾಗದಿದ್ದರೆ ಸೋಮವಾರ ಮುಂದುವರೆಸಲಿದ್ದೇವೆ ಎಂದು ವೈದ್ಯಕೀಯ ವಿದ್ಯಾರ್ಥಿ ಡಾ. ಹರೀಶ್ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ಮಾಡಿ ತೆರಳಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಸೋಮವಾರದಂದು ಸರ್ಕಾರದೊಂದಿಗೆ ಮಾತ ನಾಡಿ, ತಮ್ಮ ನಿರ್ಧಾರ ತಿಳಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದ್ದಾರೆ.

ಸರ್ಕಾರ ಶಿಷ್ಯ ವೇತನವನ್ನು ಕಾಲೇಜಿನ ಆಡಳಿತ ಮಂಡಳಿ ನೀಡಬೇಕು ಎಂದು ಸೂಚನೆ ನೀಡಿದೆ ಎಂದು ಸಚಿವರು ಹೇಳಿದ್ದಾರೆ. ನಮಗೆ ಶಿಷ್ಯ ವೇತನ ಆಡಳಿತ ಮಂಡಳಿಯಿಂದ ನೇರವಾಗಿ ಬೇಡ. ಅದು ಸರ್ಕಾರಕ್ಕೆ ನೀಡಿದರೆ ಸರ್ಕಾರದಿಂದ ನಮಗೆ ನೀಡಲಿ ಎಂದು ಹೇಳಿದರು.

## ಅಹವಾಲು ಆಲಿಸದ ಆರೋಗ್ಯ ಸಚಿವ : ಅಸಮಾಧಾನ

ದಾವಣಗೆರೆಯ ಶ್ರೀ ಜಯದೇವ ವೃತ್ತದಲ್ಲಿ ತಮ್ಮ 16 ತಿಂಗಳ ಶಿಷ್ಯ ವೇತನ ನೀಡುವಂತೆ ಒತ್ತಾಯಿಸಿ ವೈದ್ಯ ವಿದ್ಯಾರ್ಥಿಗಳು ನಡೆಸುತ್ತಿದ್ದ ಮುಷ್ಕರ ಸ್ಥಳಕ್ಕೆ ಆರೋಗ್ಯ ಸಚಿವ ಬಿ. ಶ್ರೀರಾಮುಲು ಆಗಮಿಸಲಿಲ್ಲ.

ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡಿದ್ದ ಆರೋಗ್ಯ ಸಚಿವರು ವಿದ್ಯಾರ್ಥಿಗಳ ಅಹವಾಲು ಸ್ವೀಕರಿಸುತ್ತಾರೆ ಎಂಬ ವಿಶ್ವಾಸದಲ್ಲಿದ್ದರು. ಆದರೆ, ಸಚಿವರು ಅಹವಾಲು ಆಲಿಸಲಿಲ್ಲ. ಆರೋಗ್ಯ ಸಚಿವರು ಸೌಜನ್ಯಕ್ಕಾದರೂ ಧರಣಿ ಸ್ಥಳಕ್ಕೆ ಭೇಟಿ ನೀಡಿ, ಅಹವಾಲು ಆಲಿಸಲಿಲ್ಲ ಎಂಬುದಾಗಿ ಪ್ರತಿಭಟನಾಕಾರರು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದರು.

## ಕಾಲೇಜು ಆಡಳಿತ ಮಂಡಳಿಗೆ ಸಿಎಂ ಸೂಚನೆ

ವೈದ್ಯಕೀಯ ವಿದ್ಯಾರ್ಥಿಗಳ ಶಿಷ್ಯ ವೇತನ ಭರಿಸುವಂತೆ ಕಾಲೇಜಿನ ಆಡಳಿತ ಮಂಡಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೂಚಿಸಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ತಿಳಿಸಿದ್ದಾರೆ.

ವೈದ್ಯಕೀಯ ವಿದ್ಯಾರ್ಥಿಗಳ ಮುಷ್ಕರಕ್ಕೆ ಸಂಬಂಧಿಸಿದಂತೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ಬೆಂಗಳೂರಿನಲ್ಲಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ಸಮ್ಮುಖದಲ್ಲಿ ಉನ್ನತ ಮಟ್ಟದ ಸಭೆ ನಡೆದಿದೆ. ಅದರಲ್ಲಿ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ವೈದ್ಯಕೀಯ ಸಚಿವ ಡಾ. ಸುಧಾಕರ್ ಭಾಗವಹಿಸಿದ್ದಾರೆ. ಇಡೀ ರಾಜ್ಯದಲ್ಲಿ ಒಂದೇ ಕಾನೂನು ಇದೆ. ಎರಡು ಕಾಲೇಜುಗಳಿಗೆ ಮತ್ತೊಂದು ಕಾನೂನು ಮಾಡಲು ಸಾಧ್ಯವಿಲ್ಲ. ಈ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಸರ್ಕಾರದಿಂದ ಭರಿಸುವುದಕ್ಕೆ ಆಗುವುದಿಲ್ಲ. ಅದನ್ನು ಆಡಳಿತ ಮಂಡಳಿ ಭರಿಸಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಅದಕ್ಕೆ ಶಾಸಕ ಡಾ. ಶಾಮನೂರು ಶಿವಶಂಕಪ್ಪ ಅವರು ಒಪ್ಪಿಗೆ ಸೂಚಿಸಿದ್ದಾರೆ ಎನ್ನುವ ಮಾತನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅವರು ನನಗೆ ಹೇಳಿದ್ದಾರೆ. ಅದಕ್ಕೆ ಸೋಮವಾರದಿಂದ ಚಾಲನೆ ನೀಡಲಾಗುವುದೆಂದರು.

## ಗುರುದೇವ

ಮೌನ ಮಂತ್ರ ಕಲಿಸಿ
ಮನವನು ತಣಿಸಿ
ಭಕ್ತಿಯ ಸುಧೆಯಲಿ
ತೇಲಾಡಿಸಿದೆ
ಅಜ್ಞಾನವ ದೂರವಿರಿಸಿ
ಸುಜ್ಞಾನವ ನೀಡಿದೆ
ಭಕ್ತಿಯೆ ಮುಕ್ತಿಗೆ
ಹಾದಿಯೆಂದು ಸಾರಿದೆ
ನಮೋ ಗುರುವೇ ನಿನಗೆ
ನಮನ ।

ಶಾಂತಿ ಸಹನೆಯ ಸದ್ಗುಣ
ಕಲಿಸಿದೆ
ಜ್ಞಾನದ ಅಮೃತವ ಕುಡಿಸಿದೆ
ಮಾತಲ್ಲಿ ಸವಿನುಡಿಯ
ಕಲಿಸಿದೆ
ಪರಮಾತ್ಮನ ಸಾನ್ನಿಧ್ಯಕೆ
ಮಾರ್ಗ ತೋರಿದೆ
ನಮೋ ಗುರುವೇ ನಿನಗೆ
ನಮನ ।

ಭವ ಬಂಧನವ ಬಿಡಿಸಿದೆ
ಮಹದಾನಂದವ ನೀಡಿದೆ
ಮನೆಯ
ನಂದಗೋಕುಲವಾಗಿಸಿದೆ
ಬಾಳಲಿ ಬೆಳಕನು ನೀಡಿರುವೆ
ನಮೋ ಗುರುವೇ ನಿನಗೆ ನಮನ ।

- ಜೆಂಬಗಿ ಮೃತ್ಯುಂಜಯ,

## ಬೆಳೆ ವಿಮೆ ಪಾವತಿಸಲು ಅವಧಿ ವಿಸ್ತರಣೆ

ದಾವಣಗೆರೆ, ಜು.4- 2020-21 ನೇ ಸಾಲಿನ ಮುಂಗಾರು ಹಂಗಾಮಿಗೆ ತೋಟ ಗಾರಿಕೆ ಬೆಳೆಗಳನ್ನು ಮರು ವಿನ್ಯಾಸ ಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ದಾವಣಗೆರೆ ತಾಲ್ಲೂಕಿನ ರೈತರು ಅಡಿಕೆ, ವೀಳ್ಯೆದೆಲೆ (ಕೊಯ್ಲು ಹಂತದ) ಮತ್ತು ದಾಳಿಂಬೆ ಬೆಳೆಗೆ ನೋಂದಣಿ ಮಾಡಿಕೊಳ್ಳಲು ಜೂನ್ 30 ಕ್ಕೆ ಕೊನೆಯ ದಿನಾಂಕವೆಂದು ನಿಗದಿಪಡಿಸಲಾಗಿದ್ದು, ಇದೀಗ ಇಲಾಖೆಯ ನಿರ್ದೇಶನಾಲಯದ ಪರಿಷ್ಕೃತ ಆದೇಶದಂತೆ ಜುಲೈ 10 ರವರೆಗೆ ಅಂತಿಮ ದಿನಾಂಕ ವಿಸ್ತರಿಸಲಾಗಿದೆ.

ದಾವಣಗೆರೆ ತಾಲ್ಲೂಕಿನ ರೈತರು ತಮ್ಮ ಹತ್ತಿರದ ಬ್ಯಾಂಕ್ ಹಾಗೂ ಸೇವಾ ಕೇಂದ್ರಗಳಲ್ಲಿ ತಮ್ಮ ವಿಮಾ ಯೋಜನೆಯ ಹಣ ಪಾವತಿಸಬೇಕೆಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

## ಜಿಲ್ಲೆಯ 7 ಜನರಿಗೆ ಕೊರೊನಾ

**(5ನೇ ಪುಟದಿಂದ)** ಗುಣಮುಖರಾಗಿದ್ದಾರೆ. ಹೊನ್ನಾಳಿಯ ಹತ್ತೂರಿನ ಇಬ್ಬರು ಹಾಗೂ ಹರಿಹರದ ವಿದ್ಯಾನಗರ ಸಿ ಬ್ಲಾಕ್‌ನ ಒಬ್ಬರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.
























JANATHAVANI - RNI No: 27369/75, KA/SK/CTA-275/2018-2020. O/P @ J.D. Circle P.O. Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte